ಟೋನಿ ಅಲಾಮೊ ಕ್ರೈಸ್ತ ಮಿನಿಸ್ಟ್ರಿಗಳು
ವಿಶ್ವ ಸುದ್ದಿಪತ್ರಿಕೆ
ಹೊಸ ಜೆರೂಸಲೆಮ್ ವಿಶ್ವಾದ್ಯಂತದ ಚರ್ಚುಗಳು
ಧರ್ಮಗುರು ಟೋನಿ ಅಲಾಮೊ ಅಲಾಮೊ ಕ್ರೈಸ್ತ ರಾಷ್ಟ್ರ ಸಂಪುಟ 17600

# ಮೇಲೆ ಆಕಾಶದಲ್ಲಿ ಅದ್ಭುತಕಾರ್ಯಗಳು ಹಾಗೂ ಕೆಳಗೆ ಭೂಮಿಯಲ್ಲಿ ಚಿಹ್ನೆಗಳು

### ಟೋನಿ ಅಲಾಮೊ ಅವರಿಂದ



*ಟೋನಿ ಮತ್ತು ಸೂಸನ್ ಅಲಾಮೊ, ಆರ್ಕೆಸ್ಟ್ರಾ, ಮತ್ತು ಚರ್ಚಿನ ಗಾಯಕವೃಂದ 1970 ಮತ್ತು 1980ರ ಆರಂಭದ ದಶಕಗಳಲ್ಲಿ ಅವರ ದೂರದರ್ಶನ ಕಾರ್ಯಕ್ರಮದಲ್ಲಿ.*

ಹಾರುವ ತಟ್ಟೆಗಳು ಎಂದೂ ಕರೆಯಲ್ಪಡುವ ಯುಎಫ್‌ಒ ಗಳನ್ನು ನೋಡಿರುವುದನ್ನು ಲಕ್ಷಗಟ್ಟಲೆ ಜನರು ವರದಿ ಮಾಡಿದ್ದಾರೆ. ಯುಎಫ್‌ಒಗಳ ಅಸ್ತಿತ್ವವನ್ನು ನಿರಾಕರಿಸುವ ಅಗತ್ಯವಿಲ್ಲ, ಏಕೆಂದರೆ ಅವು ನಿಜವಾಗಿಯೂ ಇವೆ.

ಯೇಸುವಿನ ಶಿಷ್ಯರು ಆತನ ಬಳಿಗೆ ಪ್ರತ್ಯೇಕವಾಗಿ ಬಂದು – ಅದು ಯಾವಾಗ ಆಗುವುದು? ನೀನು ಪ್ರತ್ಯಕ್ಷನಾಗುವುದಕ್ಕೂ ಜಗದ ಸಮಾಪ್ತಿಗೂ ಸೂಚನೆಯೇನು? ನಮಗೆ ಹೇಳು ಎನ್ನಲು ಯೇಸು ಅವರಿಗೆ ಉತ್ತರವಾಗಿ ಹೇಳಿದ್ದೇನೆಂದರೆ – ಯಾರಾದರೂ ನಿಮ್ಮನ್ನು ಮೋಸಗೊಳಿಸದಂತೆ ನೋಡಿಕೊಳ್ಳಿರಿ. ಯಾಕೆಂದರೆ ಅನೇಕರು ಬಂದು ನನ್ನ ಹೆಸರನ್ನು ಎತ್ತಿಕೊಂಡು ನಾನು ಕ್ರಿಸ್ತನು, ನಾನು ಕ್ರಿಸ್ತನು ಎಂದು ಹೇಳಿ ಎಷ್ಟೋ ಜನರನ್ನು ಮೋಸಗೊಳಿಸುವರು. ಇದಲ್ಲದೆ ಯುದ್ಧಗಳಾಗುವುದನ್ನೂ ಯುದ್ಧ [ವೆಬ್‌ಸ್ಟರ್ಸ್ ಡಿಕ್ಷನರಿಯು ಇಂಗ್ಲಿಷ್ ಪದ 'ವಾರ್', ಎಂದರೆ ಯುದ್ಧಗಳು, ಭಾಗಶಃ, ಉಪದ್ರವಗಳು, ಅಂದರೆ 'ಸಾವು ತರುವ ಯಾವುದೇ ಸಾಂಕ್ರಾಮಿಕ ಅಥವಾ ಅಂಟುರೋಗ, ಪ್ಲೇಗ್; ಹಾನಿಕರ ಎಂದು ಪರಿಗಣಿಸಲ್ಪಡುವ ಯಾವುದಾದರೂ; ಸಾವುಂಟುಮಾಡುವ ಸಾಧ್ಯತೆ ಇರುವಂಥದ್ದು; ಸಮಾಜಕ್ಕೆ ಅಪಾಯಕಾರಿ (ಯುದ್ಧದ ವಿನಾಶಕ ಅಪಾಯ ಸೂಚನೆ)' ಎಂದು ಕರೆಯುತ್ತದೆ] ಆಗುವ ಹಾಗಿದೆ ಎಂಬ ಸುದ್ದಿಗಳನ್ನೂ ನೀವು ಕೇಳಬೇಕಾಗಿರುವುದು. ಕಳವಳಪಡದಂತೆ ನೋಡಿಕೊಳ್ಳಿರಿ; ಯಾಕೆಂದರೆ ಹಾಗಾಗುವುದು ಅಗತ್ಯ. ಆದರೂ ಇದು ಇನ್ನೂ ಅಂತ್ಯಕಾಲವಲ್ಲ. ಜನರಿಗೆ ವಿರೋಧವಾಗಿ ಜನರೂ ರಾಜ್ಯಕ್ಕೆ ವಿರೋಧವಾಗಿ ರಾಜ್ಯವೂ ಏಳುವವು; ಮತ್ತು ಅಲ್ಲಲ್ಲಿ ಬರಗಳು ಉಂಟಾಗುವವು, ಮತ್ತು ಮಾರಕ ಸಂಗತಿಗಳುಂಟಾಗುವವು [ಯುದ್ಧಗಳು, ರೋಗಗಳು, ಬರಗಾಲಗಳು, ಬಿರುಗಾಳಿ, ಪ್ರವಾಹ] ಮತ್ತು ಭೂಕಂಪಗಳು ಆಗುವವು; ಇವೆಲ್ಲಾ ವೇದನೆಯ ಪ್ರಾರಂಭ.

"ಆಗ ಅವರು ನಿಮ್ಮನ್ನು ಉಪದ್ರವಕ್ಕೆ ಗುರಿಪಡಿಸುವರು ಮತ್ತು ನಿಮ್ಮನ್ನು ಕೊಲ್ಲುವರು; ಮತ್ತು ನಿಮ್ಮನ್ನು [ಕ್ರೈಸ್ತ ಆತ್ಮನಿಂದ ಮರುಜನ್ಮವೆತ್ತ] ನನ್ನ ಹೆಸರಿನ ನಿಮಿತ್ತ ಎಲ್ಲಾ ಜನಾಂಗಗಳವರು ಹಗೆಯಾಗಿ ಮಾಡಿಕೊಳ್ಳುವರು. ಆಗ ಅನೇಕರು ಹಿಂಜರಿದು ಒಬ್ಬರನ್ನೊಬ್ಬರು ಹಿಡಿದುಕೊಡುವರು; ಒಬ್ಬರ ಮೇಲೊಬ್ಬರು ದ್ವೇಷ ಮಾಡುವರು" (ಮತ್ತಾಯ 24:3-10).[1] ವೆಬ್‌ಸ್ಟರ್ಸ್ ಡಿಕ್ಷನರಿಯಲ್ಲಿ, "ದ್ವೇಷ" (ಇಂಗ್ಲಿಷ್ ಪದ ಹೇಟ್ರೆಡ್) ಎಂದರೆ "ಪ್ರಬಲವಾದ ಅಪ್ರೀತಿ ಅಥವಾ ವೈಮನಸ್ಯ ಹೊಂದಿರುವುದು, ತಪ್ಪಿಸಲು ಬಯಸುವುದು [ದೇವರನ್ನು ದ್ವೇಷಿಸುವುದು, ಬೈಬಲ್ ಅನ್ನು ದ್ವೇಷಿಸುವುದು, ಕ್ರೈಸ್ತಮತೀಯರನ್ನು ದ್ವೇಷಿಸುವುದು ಎಂಬ ಅರ್ಥವಿದೆ.]"ಅಪೋಸ್ತಲನಾದ ಪೇತ್ರನು, "ಮೇಲೆ ಆಕಾಶದಲ್ಲಿ ಅದ್ಭುತಕಾರ್ಯಗಳೂ, ಕೆಳಗೆ ಭೂಮಿಯಲ್ಲಿ ಚಿಹ್ನೆಗಳೂ" ಸಂಭವಿಸುವವು (ಅಪೋಸ್ತಲರ ಕೃತ್ಯಗಳು 2:19) ಎಂದು ಹೇಳುವ ಮೂಲಕ ಲೋಕದ ಅಂತ್ಯದ ಕುರಿತಾದ ಯೋವೇಲನ ಭವಿಷ್ಯವಾಣಿಯನ್ನು, ಭಾಗಶಃ, ಪುನರುಚ್ಚರಿಸುತ್ತಾನೆ. ದಿವ್ಯ ರಚನೆಯು ಅಗಾಧವಾಗಿ ಬದಲಾಗಿದೆ ಎಂದು ನಿಮಗೆ ತಿಳಿದಿದೆಯೆ? ಅಲ್ಲದೆ, ಜನರು ನೋಡುತ್ತಿರುವ ಆ ಯುಎಫ್‌ಒಗಳು ಅಥವಾ ಹಾರುವ ತಟ್ಟೆಗಳು ವಾಸ್ತವವಾಗಿ, ಭೂಮಿಯನ್ನು ನಾಶಗೊಳಿಸಲು ದೇವರ ಕೋಪವನ್ನು ಅದರ ಮೇಲೆ ಸುರಿಯುವುದಕ್ಕಿಂತ ಮೊದಲು ಭೂಮಿಯ ಸಮೀಕ್ಷೆ ನಡೆಸುತ್ತಿರುವ ದೇವದೂತರು ಎಂದು ನಿಮಗೆ ತಿಳಿದಿದೆಯೆ? ಭೂಮಿಯಲ್ಲಿರುವ ಪಾಪಿಗಳ ಮೇಲೆ ಆತನ ಕೋಪವನ್ನು ಸುರಿಯಲು ದೇವರು ಯಾವಾಗಲೂ ತನ್ನ ದೂತರನ್ನು ಕಳುಹಿಸಿದ್ದಾರೆ.[2]

"ಯೆಹೋವನು ನೋಡಿ, ತಾನು ಭೂಮಿಯ ಮೇಲೆ ಮನುಷ್ಯರನ್ನು ಉಂಟುಮಾಡಿದ್ದಕ್ಕೆ ಪಶ್ಚಾತ್ತಾಪಪಟ್ಟು ತನ್ನ ಹೃದಯದಲ್ಲಿ ನೊಂದುಕೊಂಡನು. ಮತ್ತು ಯೆಹೋವನು ನಾನು ಸೃಷ್ಟಿಸಿದ ಮನುಷ್ಯಜಾತಿಯನ್ನು ಭೂಮಿಯ ಮೇಲಿನಿಂದ ಅಳಿಸಿಬಿಡುವೆನು; ಅದನ್ನು ಉಂಟುಮಾಡಿದ್ದಕ್ಕೆ ನನ್ನಲ್ಲಿ ಪಶ್ಚಾತ್ತಾಪ ಹುಟ್ಟಿತು; ಮನುಷ್ಯರೊಂದಿಗೆ ಸಕಲ ಮೃಗಕ್ರಿಮಿಪಕ್ಷಿಗಳನ್ನೂ ಅಳಿಸಿಬಿಡುವೆನು ಅಂದುಕೊಂಡನು" ಎಂದು ಆದಿಕಾಂಡ 6:6-7 ಹೇಳುತ್ತದೆ.

ಈಗ ಯೇಸು ಮತ್ತಾಯ 24:37-39ರಲ್ಲಿ ಕೂಡ, "ನೋಹನ ದಿವಸಗಳು ಹೇಗಿದ್ದವೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯೂ ಇರುವುದು. ಹೇಗೆಂದರೆ ಜಲಪ್ರಳಯಕ್ಕೆ ಮುಂಚಿನ ದಿನಗಳಲ್ಲಿ ನೋಹನು ನಾವೆಯಲ್ಲಿ ಸೇರಿದ ದಿನದ

*(ಪುಟ 2 ರಲ್ಲಿ ಮುಂದುವರಿದಿದೆ)*

**1** ಮಾರ್ಕ 13:12-13, ಲೂಕ 12:51-53, ಯೋಹಾನ 16:1-3 **2** ಆದಿಕಾಂಡ 19:1, 13, 2 ಸಮುವೇಲನು 24:15-17, 24:15-16, 2 ಅರಸುಗಳು 19:35, 2 ಪೂರ್ವಕಾಲವೃತ್ತಾಂತ 32:21, ಕೀರ್ತನೆಗಳು 78:49, ಮತ್ತಾಯ 13:41-42, ಅಪೋಸ್ತಲರ ಕೃತ್ಯಗಳು 12:23, 2 ಥೆಸಲೋನಿಕದವರಿಗೆ 1:7-9, ಪ್ರಕಟನೆ 7:1-2, 9:15, 15:1, ಅಧ್ಯಾಯ 16

## ಮೇಲೆ ಆಕಾಶದಲ್ಲಿ ಅದ್ಭುತಕಾರ್ಯಗಳು ಹಾಗೂ ಕೆಳಗೆ ಭೂಮಿಯಲ್ಲಿ ಚಿಹ್ನೆಗಳು

*(ಪುಟ 1 ರಿಂದ ಮುಂದುವರಿದಿದೆ)*

ತನಕ ಜನರು ಉಣ್ಣುತ್ತಾ ಕುಡಿಯುತ್ತಾ ಮದುವೆ ಮಾಡಿಕೊಳ್ಳುತ್ತಾ ಮಾಡಿಕೊಡುತ್ತಾ ಇದ್ದು ಪ್ರಳಯದ ನೀರು ಬಂದು ಎಲ್ಲರನ್ನು ಕೊಚ್ಚಿಕೊಂಡುಹೋಗುವ ತನಕ ಏನೂ ತಿಳಿಯದೆ ಇದ್ದರಲ್ಲ. ಅದರಂತೆ ಮನುಷ್ಯಕುಮಾರನು ಪ್ರತ್ಯಕ್ಷನಾಗುವ ಕಾಲದಲ್ಲಿಯೂ ಇರುವರು" ಎಂದು ಹೇಳಿದರು.

ತನ್ನ ದೂತರು ನೋಹ, ಅವನ ಹೆಂಡತಿ, ಮೂವರು ಗಂಡು ಮಕ್ಕಳು, ಮತ್ತು ಅವರ ಹೆಂಡತಿಯರನ್ನು ಹೊರತುಪಡಿಸಿ ಭೂಮಿಯ ಮೇಲಿದ್ದ ಪ್ರತಿಯೊಂದು ಜೀವಂತ ವಸ್ತುವನ್ನು ಜಲಪ್ರಳಯದ ಮೂಲಕ ನಾಶಗೊಳಿಸುವಂತೆ ಮಾಡುವಷ್ಟು ತಾನು ಮನುಷ್ಯರನ್ನು ಮಾಡಿದ್ದಕ್ಕೆ ನೋಹನ ದಿನದಲ್ಲಿ ದೇವರಿಗೆ ಪಶ್ಚಾತ್ತಾಪವಾಗಿದ್ದರೆ, ನೋಹನ ದಿನದಲ್ಲಿದ್ದ ಜನರಿಗಿಂತ ಲೋಕದ ಜನರು ಇನ್ನೂ ಹೆಚ್ಚು ಪಾಪಿಗಳು ಎಂದು ಆತ ಪರಿಗಣಿಸಿದಾಗ, ಸಂಪೂರ್ಣ ಜಗತ್ತಿನ ಜನರಿಗೆ ಇಂದು ಅದನ್ನೇ ಮಾಡುವುದಕ್ಕೆ ದೇವರು ತನ್ನ ದೂತರನ್ನು ಬಳಸಬಹುದು ಎಂದು ನಿಮಗನಿಸುವುದಿಲ್ಲವೆ?

ಹೆಣ್ಣು ದೂತರು ಎಂಬುದಿಲ್ಲ. ದೇವರ ಎಲ್ಲಾ ದೂತರು ಗಂಡಸರು. ಹಾರುವ ತಟ್ಟೆಗಳನ್ನು ಹಾರಿಸುತ್ತಾ, ಇಂದು ಭೂಮಿಯ ಮೇಲೆ ನಡೆಸಲಾಗುತ್ತಿರುವ ಪಾಪದ ಪರಿಶೀಲನೆ ನಡೆಸುತ್ತಾ, ಸಂಪೂರ್ಣ ಭೂಮಿಯ ಮೇಲೆ ಬೇಗನೆ ಬರಲಿರುವ ವಿನಾಶದ ಮಾದರಿಯನ್ನು ಅಲ್ಲಲ್ಲಿ ಜನರಿಗೆ ನೀಡುತ್ತಿರುವವರು ಎಲ್ಲರೂ ಗಂಡು ದೂತರು.

ಕಾಲಾದ್ಯಂತ, ಸೊದೋಮ್, ಗೊಮೋರ, ಮತ್ತು ಧರ್ಮಗ್ರಂಥಗಳಾದ್ಯಂತ ಹಲವಾರು ಇತರ ಸ್ಥಳಗಳಲ್ಲಿದ್ದಂತೆ, ಭೂಮಿಯ ಮೇಲಿರುವ ಮನುಷ್ಯರಲ್ಲಿ ಸೈತಾನನ ಕೆಲಸಗಳನ್ನು ನಾಶಪಡಿಸಲು ದೇವರು ಯಾವಾಗಲೂ ಒಳ್ಳೆಯ ದೂತರನ್ನು ಬಳಸಿದ್ದಾರೆ.[3] ಈಗಿನ ಭೂಮಿಯ ಎರಡನೇ ಮತ್ತು ಕೊನೆಯ ವಿನಾಶದಲ್ಲಿ, ಅದು ಸಂಪೂರ್ಣವಾಗಿ ನಾಶವಾಗುವವರೆಗೆ ದೇವದೂತರು ಭೂಮಿಯ ಮೇಲೆ ಕೊನೆಯ ಹದಿನಾಲ್ಕು ಉಪದ್ರವಗಳನ್ನು ಸುರಿಯುವರು ಎಂದು ದೇವರು ಪ್ರಕಟನೆಯಲ್ಲಿ ನಮಗೆ ಹೇಳುತ್ತಾರೆ.[4]

8:2 ರಿಂದ 9:21ರ ವರೆಗಿನ ಪ್ರಕಟನೆ ಹೀಗೆಂದು ಹೇಳುತ್ತದೆ, "ಆಗ ದೇವರ ಸನ್ನಿಧಿಯಲ್ಲಿ ನಿಂತಿರುವ ಏಳು ಮಂದಿ ದೇವದೂತರನ್ನು ಕಂಡೆನು; ಅವರಿಗೆ ಏಳು ತುತ್ತೂರಿಗಳನ್ನು ನೀಡಲಾಯಿತು. ಆಮೇಲೆ ಮತ್ತೊಬ್ಬ ದೇವದೂತನು ಬಂದು ಯಜ್ಞವೇದಿಯ ಬಳಿಯಲ್ಲಿ ನಿಂತನು; ಅವನ ಕೈಯಲ್ಲಿ ಚಿನ್ನದ ಧೂಪಾರತಿ ಇತ್ತು. ಸಿಂಹಾಸನದ ಮುಂದಣ ಚಿನ್ನದ ಯಜ್ಞವೇದಿಯ ಮೇಲೆ ದೇವಜನರೆಲ್ಲರ ಪ್ರಾರ್ಥನೆಗಳ ಜೊತೆಯಲ್ಲಿ ಸಮರ್ಪಿಸುವುದಕ್ಕಾಗಿ ಅವನಿಗೆ ಬಹಳ ಧೂಪವನ್ನು ನೀಡಲಾಯಿತು. ಆಗ ಧೂಪದ ಹೊಗೆಯು ದೇವದೂತನ ಕೈಯೊಳಗಿಂದ ಹೊರಟು ದೇವಜನರ ಪ್ರಾರ್ಥನೆಗಳೊಂದಿಗೆ ಕೂಡಿ ದೇವರ ಸನ್ನಿಧಿಗೆ ಏರಿಹೋಯಿತು. ತರುವಾಯ ಆ ದೇವದೂತನು ಧೂಪಾರತಿಯನ್ನು ತೆಗೆದುಕೊಂಡು ಯಜ್ಞವೇದಿಯ ಮೇಲಿದ್ದ ಕೆಂಡಗಳಿಂದ ತುಂಬಿಸಿ ಭೂಮಿಗೆ ಬಿಸಾಡಿದನು. ಆಗ ಗುಡುಗುಗಳೂ ವಾಣಿಗಳೂ ಮಿಂಚುಗಳೂ ಭೂಕಂಪವೂ ಉಂಟಾದವು. ಏಳು ತುತ್ತೂರಿಗಳನ್ನು ಹಿಡಿದಿದ್ದ ಏಳು ಮಂದಿ ದೇವದೂತರು ತುತ್ತೂರಿಗಳನ್ನೂದುವದಕ್ಕೆ ಸಿದ್ಧಮಾಡಿಕೊಂಡರು.

"ಮೊದಲನೆಯ ದೇವದೂತನು ತುತ್ತೂರಿಯನ್ನೂದಿದಾಗ ರಕ್ತದಲ್ಲಿ ಕಲಸಿದ್ದ ಆಲಿಕಲ್ಲಿನ ಮಳೆಯೂ ಬೆಂಕಿಯೂ ಭೂಮಿಗೆ ಸುರಿಸಲ್ಪಟ್ಟವು; ಭೂಮಿಯೊಳಗೆ ಮೂರರಲ್ಲಿ ಒಂದು ಭಾಗ ಸುಟ್ಟುಹೋಯಿತು; ಮರಗಳೊಳಗೆ ಮೂರರಲ್ಲಿ ಒಂದು ಭಾಗ ಸುಟ್ಟುಹೋಯಿತು; ಹಸಿರು ಹುಲ್ಲೆಲ್ಲಾ ಸುಟ್ಟುಹೋಯಿತು. ಎರಡನೆಯ ದೇವದೂತನು ತುತ್ತೂರಿಯನ್ನೂದಿದಾಗ ಬೆಂಕಿಹತ್ತಿ ಉರಿಯುವ ದೊಡ್ಡ ಬೆಟ್ಟವೋ ಎಂಬಂತಿರುವ ಒಂದು ವಸ್ತುವು ಸಮುದ್ರದಲ್ಲಿ ಬಿತ್ತು. ಆಗ ಸಮುದ್ರದೊಳಗೆ ಮೂರರಲ್ಲಿ ಒಂದು ಭಾಗ ರಕ್ತವಾಯಿತು; ಸಮುದ್ರಜೀವಿಗಳೊಳಗೆ ಮೂರರಲ್ಲಿ ಒಂದು ಭಾಗ ಸತ್ತುಹೋದವು; ಹಡಗುಗಳೊಳಗೆ ಮೂರರಲ್ಲಿ ಒಂದು ಭಾಗ ನಾಶಗೊಂಡವು."- ಮೂರನೆಯ ದೇವದೂತನು ತುತ್ತೂರಿಯನ್ನೂದಿದಾಗ ಪಂಜಿನಂತೆ ಉರಿಯುವ ಒಂದು ದೊಡ್ಡ ನಕ್ಷತ್ರವು ಆಕಾಶದಿಂದ ಬಿತ್ತು. ಅದು ನದಿಗಳೊಳಗೆ ಮೂರರಲ್ಲಿ ಒಂದು ಭಾಗದ ಮೇಲೆಯೂ [ಮತ್ತು ಇದಕ್ಕೆ ಮೊದಲು, ದೇವರ ವಾಯುಪಡೆ, ಸಾಮಾನ್ಯವಾಗಿ ಯುಎಫ್‌ಒಗಳು ಎಂದು ಕರೆಯಲ್ಪಡುವ ಹಾರುವ ತಟ್ಟೆಗಳು, ಭೂಮಿಯ ಮೇಲೆ ಎಲ್ಲಾ ಭ್ರಷ್ಟಾಚಾರವನ್ನು ಗಮನಿಸುತ್ತಿದ್ದವು ಮತ್ತು ಅದರಲ್ಲಿನ ದೂತರು ಅಸಹ್ಯವಾದ, ದುಷ್ಟವಾದ ಮಾನವಕುಲದ ಮೇಲೆ ದೇವರ ಕೋಪವನ್ನು ಸುರಿಸುವುದನ್ನು ನೋಡಲು ಸಂತೋಷಪಡುತ್ತಿದ್ದರು] ನೀರಿನ ಒರತೆಗಳ ಮೇಲೆಯೂ ಬಿತ್ತು. ಆ ನಕ್ಷತ್ರಕ್ಕೆ ಮಾಚಿಪತ್ರೆ ಎಂದು ಹೆಸರು. ನೀರಿನೊಳಗೆ ಮೂರರಲ್ಲಿ ಒಂದು ಭಾಗ ಮಾಚಿಪತ್ರೆಯಂತೆ ಕಹಿಯಾಯಿತು. ಆ ನೀರು ವಿಷವಾದುದರಿಂದ ಮನುಷ್ಯರಲ್ಲಿ ಅನೇಕರು ಸತ್ತರು. ನಾಲ್ಕನೆಯ ದೇವದೂತನು ತುತ್ತೂರಿಯನ್ನೂದಿದಾಗ ಸೂರ್ಯ ಚಂದ್ರ ನಕ್ಷತ್ರಗಳೊಳಗೆ ಮೂರರಲ್ಲಿ ಒಂದು ಭಾಗವು ಬಡಿಯಲ್ಪಟ್ಟು ಕತ್ತಲಾಯಿತು. ಆದ್ದರಿಂದ ಹಗಲಿನೊಳಗೆ ಮೂರರಲ್ಲಿ ಒಂದು ಭಾಗವು ಪ್ರಕಾಶವಿಲ್ಲದೆ ಇತ್ತು. ಮತ್ತು ರಾತ್ರಿಯು ಹಾಗೆಯೇ ಆಯಿತು.

"ಆ ಮೇಲೆ ನಾನು ನೋಡಲಾಗಿ ಇಗೋ, ಒಬ್ಬನೇ ದೇವದೂತನು ಆಕಾಶಮಧ್ಯದಲ್ಲಿ ಹಾರಾಡುತ್ತಿದ್ದನು. ಅವನು – ಅಯ್ಯೋ ಅಯ್ಯೋ ಅಯ್ಯೋ, ಊದಬೇಕಾಗಿರುವ ಮೂವರು ದೇವದೂತರ ಮಿಕ್ಕಿದ ತುತ್ತೂರಿಯ ಧ್ವನಿಗಳು ಉಂಟಾಗುವಾಗ ಭೂನಿವಾಸಿಗಳಿಗೆ ಎಂಥಾ ವಿಪತ್ತುಗಳು ಸಂಭವಿಸುವವು ಎಂದು ಮಹಾಶಬ್ದದಿಂದ ಹೇಳುವುದನ್ನು ಕೇಳಿದೆನು. [ದೇವದೂತರು – ದೇವರ ನಾಶದ ದೂತರು – ಭವಿಷ್ಯದಲ್ಲಿ ಏನಿರಲಿದೆ ಎಂಬುದನ್ನು ಬಹಳ ಚೆನ್ನಾಗಿ ಅರಿತಿರುವುದನ್ನು ಈ ಧರ್ಮಗ್ರಂಥಗಳು ನಮಗೆಲ್ಲರಿಗೂ ತೋರಿಸುತ್ತವೆ. ಭೂಮಿಯ ಮೇಲಿರುವ ಜನರಿಗೆ, ದುಷ್ಟರಿಗೆ, ಅದನ್ನು ಅರಿತುಕೊಳ್ಳಲು ಸಾಧ್ಯವಾಗದಿರುವುದು ಬಹಳ ವಿಷಾದನೀಯ!].

"ಐದನೆಯ ದೇವದೂತನು ತುತ್ತೂರಿಯನ್ನೂದಿದಾಗ ಆಕಾಶದಿಂದ ಭೂಮಿಗೆ ಬಿದ್ದ ಒಂದು ನಕ್ಷತ್ರವನ್ನು ಕಂಡೆನು. ಅವನಿಗೆ ತಳವಿಲ್ಲದ ಕೂಪಕ್ಕೆ ಹೋಗುವ ಬೀಗದಕೈ ಕೊಡಲ್ಪಟ್ಟಿತು. ಅವನು ತಳವಿಲ್ಲದ ಕೂಪವನ್ನು ತೆರೆಯಲು ಕೂಪದಿಂದ ಬಂದ ಹೊಗೆ ದೊಡ್ಡ ಕುಲುಮೆಯ ಹೊಗೆಯಂತೆ ಏರಿತು; ಕೂಪದ ಹೊಗೆಯಿಂದ ಸೂರ್ಯನೂ ಆಕಾಶವೂ ಕತ್ತಲಾದವು. ಹೊಗೆಯೊಳಗಿಂದ ಮಿಡತೆಗಳು ಭೂಮಿಯ ಮೇಲೆ ಹೊರಟುಬಂದವು. ಭೂಮಿಯಲ್ಲಿರುವ ಚೇಳುಗಳಿಗೆ ಸಾಮರ್ಥ್ಯವಿರುವ ಪ್ರಕಾರ ಅವುಗಳಿಗೆ ಸಾಮರ್ಥ್ಯ ಕೊಡಲ್ಪಟ್ಟಿತು. ಭೂಮಿಯ ಮೇಲಿರುವ ಹುಲ್ಲನ್ನಾಗಲಿ ಯಾವ ಗಿಡಗಳನ್ನಾಗಲಿ ಮರಗಳನ್ನಾಗಲಿ ಕೆಡಿಸದೆ ಹಣೆಯ ಮೇಲೆ ದೇವರ ಮುದ್ರೆಯಿಲ್ಲದವರಾದ ಮನುಷ್ಯರನ್ನು ಮಾತ್ರ ಕೆಡಿಸಬಹುದೆಂದು ಅವುಗಳಿಗೆ ಅಪ್ಪಣೆಯಾಯಿತು. [ದೇವರು ಹೊಸ ಒಡಂಬಡಿಕೆಯಲ್ಲಿರುವುದಕ್ಕಿಂತ ಹಳೆ ಒಡಂಬಡಿಕೆಯಲ್ಲಿ ಹೆಚ್ಚು ಕ್ರೋಧಿತರಾಗಿರುತ್ತಾರೆ ಎಂದು ಜನರು ಹೇಳುವುದು ವಿಚಿತ್ರವಾಗಿದೆಯಲ್ಲವೆ? ಇಲ್ಲಿ ಅದು ಹಾಗೆ ಕಾಣಿಸುವುದಿಲ್ಲ, ಅಲ್ಲವೆ?] ಇವರನ್ನು ಕೊಲ್ಲದೆ ಐದು ತಿಂಗಳುಗಳವರೆಗೂ ಪೀಡಿಸುವುದಕ್ಕೆ ಅಪ್ಪಣೆಯಾಯಿತು. ಅವರಿಗುಂಟಾದ ಪೀಡೆಯು ಚೇಳು ಮನುಷ್ಯನನ್ನು ಕುಟುಕುವುದ-

---

**3** *ಆದಿಕಾಂಡ* 19:12-25 **4** *ಪ್ರಕಟನೆ* 8:7-13, 9:1-19, 11:19, 14:15-20, 15:1, 5-8, 16:1-12, 17-21

### ಜಿಂಬಾಬ್ವೆ

ಮಾನ್ಯರೇ,

ರೇಡಿಯೊ ಆಫ್ರಿಕಾ ಟೂ ಕಾರ್ಯಕ್ರಮವು ನನ್ನ ಸಮುದಾಯದಲ್ಲಿ ಎಷ್ಟೋ ಜನರಿಗೆ ಹೊಸ ಭರವಸೆಯನ್ನು ತಂದಿದೆ. ನಾನು ಅದನ್ನು ಮೊದಲು ಕೇಳಿದಾಗಲೇ ನನ್ನ ಮನಮುಟ್ಟಿತು ಮತ್ತು ನನ್ನೊಂದಿಗೆ ಅದನ್ನು ಕೇಳಲು ನಾನು ನನ್ನ ಕುಟುಂಬವನ್ನು ಆಮಂತ್ರಿಸಿದೆನು. ಅಂದಿನಿಂದ ಅದು ನಮ್ಮ ಬದುಕುಗಳನ್ನು ಬದಲಾಯಿಸಿದೆ. ಆಫ್ರಿಕಾದಾದ್ಯಂತ ಸುವಾರ್ತೆಯನ್ನು ಹರಡುತ್ತಿರುವುದಕ್ಕಾಗಿ ನಿಮಗೆ ಧನ್ಯವಾದಗಳು.

ಕರುಣಾಳು ಆದ ನಮ್ಮ ಪ್ರಭು ನಿಮಗೆ ತಕ್ಕ ಪ್ರತಿಫಲ ನೀಡಲಿ. ನೀವು ನೀಡಬಹುದಾದ ಯಾವುದೇ ಧಾರ್ಮಿಕ ಸಾಮಗ್ರಿಗಳನ್ನು ದಯವಿಟ್ಟು ನನಗೆ ಕಳುಹಿಸಿ. ಅವು ನನ್ನ ಆಧ್ಯಾತ್ಮಿಕ ಬದುಕನ್ನು ಉದ್ಧಾರಗೊಳಿಸುವಂಥವಾಗುತ್ತವೆ.

ಕೃತಜ್ಞತಾಪೂರ್ವಕವಾಗಿ ನಿಮ್ಮ,
ವಿನ್‌ಸ್ಟನ್ ಟ್ಯಾಂಬ್ವಾಡ್ ಬುಲವಾಯೊ, ಜಿಂಬಾಬ್ವೆ

ರಿಂದ ಉಂಟಾಗುವ ಪೀಡೆಗೆ ಸಮಾನವಾಗಿತ್ತು. ಆ ಕಾಲದಲ್ಲಿ ಮನುಷ್ಯರು ಮರಣವನ್ನು ಬಯಸುವರು, ಆದರೆ ಅದು ಪ್ರಾಪ್ತವಾಗುವುದಿಲ್ಲ; ಸಾಯಬೇಕೆಂದು ಕೋರುವರು, ಆದರೆ ಮೃತ್ಯುವು ಅವರ ಬಳಿಯಿಂದ ಓಡಿಹೋಗುವುದು. [ಹಳೆ ಒಡಂಬಡಿಕೆಯಲ್ಲಿ ಇಂತಹ ಕಡುಕಷ್ಟಕರವಾದ ಪ್ರಮಾಣದಲ್ಲಿ ಶಿಕ್ಷೆಯನ್ನು ಎಂದೂ ನೀಡಲಾಗುತ್ತಿರಲಿಲ್ಲ. ನೀವೇ ಆಲೋಚನೆ ಮಾಡಿ – ನೀವು ಅದರ ಪರವಾಗಿ ಅಥವಾ ಅದಕ್ಕೆ ವಿರುದ್ಧವಾಗಿ ಮತ ಚಲಾಯಿಸಲು ಸಾಧ್ಯವಿಲ್ಲ, ಏಕೆಂದರೆ ದೇವರು ಮಹಾನ್ ಸರ್ವಾಧಿಕಾರಿ, ಮತ್ತು ಜಗತ್ತಿನ ಜನರಿಗೆ ಇಷ್ಟವಿರಲಿ, ಇಷ್ಟವಿರದಿರಲಿ, ಆತ ಸದಾ ಅಧಿಕಾರದಲ್ಲಿರುತ್ತಾರೆ. ರಾಜಕೀಯ ಯಥಾರ್ಥತೆ ಇಲ್ಲ ಮತ್ತು ಪ್ರಜಾತಂತ್ರವಿಲ್ಲ – ಕೇವಲ ದೇವತಾ ಸರ್ಕಾರ!]ಆ ಮಿಡತೆಗಳ ರೂಪವು ಯುದ್ಧಕ್ಕೆ ಸನ್ನದ್ಧವಾಗಿರುವ ಕುದುರೆಗಳ ರೂಪದಂತೆ ಇತ್ತು; ಅವುಗಳ ತಲೆಯ ಮೇಲೆ ಚಿನ್ನದ ಕಿರೀಟಗಳಂತೆ ಏನೋ ಇದ್ದವು; ಅವುಗಳ ಮುಖಗಳು ಮನುಷ್ಯರ ಮುಖಗಳ ಹಾಗಿದ್ದವು. ಸ್ತ್ರೀಯರ ಕೂದಲಿನಂತಿರುವ ಕೂದಲು ಅವುಗಳಿಗೆ ಇತ್ತು; ಅವುಗಳ ಹಲ್ಲುಗಳು ಸಿಂಹಗಳ ಹಲ್ಲುಗಳ ಹಾಗಿದ್ದವು. ಅವುಗಳಿಗೆ ಉಕ್ಕಿನ ಕವಚಗಳಂತಿದ್ದ ಕವಚಗಳಿದ್ದವು; ಅವುಗಳ ರೆಕ್ಕೆಗಳ ಶಬ್ದವು ಯುದ್ಧಕ್ಕೆ ಓಡುವ ರಥಾಶ್ವಗಳ ಶಬ್ದದ ಹಾಗೆ ಇತ್ತು. ಚೇಳಿಗಿರುವಂತೆ ಅವುಗಳಿಗೆ ಬಾಲಗಳೂ ಕೊಂಡಿಗಳೂ ಇವೆ; ಮನುಷ್ಯರನ್ನು ಐದು ತಿಂಗಳುಗಳವರೆಗೂ ಪೀಡಿಸುವ ಸಾಮರ್ಥ್ಯವು ಅವುಗಳ ಬಾಲಗಳಲ್ಲಿಯೇ ಇರುವುದು. ತಳವಿಲ್ಲದ ಕೂಪದ ಅಧಿಕಾರಿಯಾದ ದೂತನು ಅವುಗಳನ್ನಾಳುವ ಅರಸನು; ಅವನಿಗೆ ಇಬ್ರಿಯ ಭಾಷೆಯಲ್ಲಿ ಅಬದ್ದೋನನೆಂತಲೂ ಗ್ರೀಕ್ ಭಾಷೆಯಲ್ಲಿ ಅಪೊಲ್ಲುವೋನನೆಂತಲೂ ಹೆಸರುಂಟು.

"ಮೊದಲನೆಯ ವಿಪತ್ತು ಕಳೆದು ಹೋಯಿತು; ಇಗೋ, ಇನ್ನೂ ಎರಡು ವಿಪತ್ತುಗಳು ಬರಬೇಕು. ಆರನೆಯ ದೇವದೂತನು ತುತ್ತೂರಿಯನ್ನೂದಿದಾಗ ದೇವರ ಸಮ್ಮುಖದಲ್ಲಿರುವ ಚಿನ್ನದ ವೇದಿಯ ಕೊಂಬುಗಳಿಂದ ಹೊರಟ ಒಂದೇ ಧ್ವನಿಯನ್ನು ಕೇಳಿದೆನು. ಅದು ತುತ್ತೂರಿಯನ್ನು ಹಿಡಿದಿದ್ದ ಆರನೆಯ ದೇವದೂತನಿಗೆ – ಯೂಫ್ರೇಟೀಸ್ ಎಂಬ ಮಹಾನದಿಯ ಬಳಿಯಲ್ಲಿ ಕಟ್ಟಿರುವ ನಾಲ್ಕು ಮಂದಿ ದೇವದೂತರನ್ನು ಬಿಚ್ಚಿಬಿಡು ಎಂದು ಹೇಳಿತು. ಆಗ ಮನುಷ್ಯರೊಳಗೆ ಮೂರರಲ್ಲಿ ಒಂದು ಭಾಗದ ಜನರನ್ನು ಸಂಹಾರಮಾಡುವದಕ್ಕಾಗಿ ಅದೇ ವರುಷ ಅದೇ ತಿಂಗಳು ಅದೇ ದಿನ ಅದೇ ತಾಸಿಗೆ ಸಿದ್ಧವಾಗಿದ್ದ ಆ ನಾಲ್ಕು ಮಂದಿ ದೇವದೂತರನ್ನು ಬಿಚ್ಚಿಬಿಟ್ಟರು; ಕುದುರೆ ದಂಡಿನವರ ಸಂಖ್ಯೆಯು ಇಪ್ಪತ್ತು ಕೋಟಿ ಎಂದು ನನಗೆ ಕೇಳಿಸಿತು.ನಾನು ದರ್ಶನದಲ್ಲಿ ಕಂಡ ಕುದುರೆಗಳ ಮತ್ತು ಸವಾರರ ವಿವರಣೆ ಹೇಗೆಂದರೆ – ಸವಾರರ ಜಾಕೀಟುಗಳ ಬಣ್ಣವು ಬೆಂಕಿ, ಹೊಗೆ, ಮತ್ತು ಗಂಧಕ ಇವುಗಳ ಬಣ್ಣದ ಹಾಗಿತ್ತು. ಕುದುರೆಗಳ ತಲೆಗಳು ಸಿಂಹಗಳ ತಲೆಗಳಂತಿದ್ದವು; ಅವುಗಳ ಬಾಯಿಂದ ಬೆಂಕಿ ಹೊಗೆ ಗಂಧಕ ಇವುಗಳು ಹೊರಡುತ್ತಿದ್ದವು. ಅವುಗಳ ಬಾಯಿಂದ ಹೊರಟ ಆ ಬೆಂಕಿ ಹೊಗೆ ಗಂಧಕ ಎಂಬ ಮೂರು ಉಪದ್ರವಗಳಿಂದ ಮನುಷ್ಯರಲ್ಲಿ ಮೂರನೆಯ ಭಾಗವು ಹತವಾಯಿತು [ಆ ಸಮಯದಲ್ಲಿ, ಇಂದು ಇರುವಂತೆ, ಭೂಮಿಯ ಮೇಲೆ ಏಳು ಶತಕೋಟಿ ಜನರು ಇದ್ದಿದ್ದರೆ, ಮತ್ತು ಅವರಲ್ಲಿ ಮೂರನೆಯ ಭಾಗ ಈ ಉಪದ್ರವದಿಂದ ಕೊಲ್ಲಲ್ಪಟ್ಟಿದ್ದರೆ, ಒಮ್ಮೆಗೆ ಕೊಲ್ಲಲ್ಪಟ್ಟ ಜನರ ಸಂಖ್ಯೆಗೆ ಸಂಬಂಧಿಸಿದಂತೆ ಇದು ಚರಿತ್ರೆಯಲ್ಲಿ ಸಾಟಿಯಾಗದ ಸಂಖ್ಯೆಯಾಗಿರುತ್ತಿತ್ತು. ನೋಹ ಮತ್ತು ಅವನ ಕುಟುಂಬವನ್ನು, ಅಂದರೆ ಎಂಟು ಆತ್ಮಗಳನ್ನು ಹೊರತುಪಡಿಸಿ ಉಳಿದವರೆಲ್ಲರೂ ನೀರುಪಾಲಾದರು ಎಂದು ನಮಗೆ ತಿಳಿದಿದ್ದರೂ, ನೋಹನ ದಿನಗಳ ಜಲಪ್ರಳಯದಲ್ಲಿ ಎಷ್ಟು ಜನರು ಕೊಲ್ಲಲ್ಪಟ್ಟರು ಎಂಬುದು ನಮಗೆ ಇನ್ನೂ ತಿಳಿದಿಲ್ಲ.[5]]. ಆ ಕುದುರೆಗಳ ಸಾಮರ್ಥ್ಯವು ಅವುಗಳ ಬಾಯಲ್ಲಿಯೂ ಬಾಲಗಳಲ್ಲಿಯೂ ಇತ್ತು. ಅವುಗಳ ಬಾಲಗಳು ತಲೆಗಳುಳ್ಳವುಗಳಾಗಿ ಸರ್ಪಗಳ ಹಾಗೆ ಇದ್ದವು. ಅವುಗಳಿಂದ ಕೇಡನ್ನುಂಟುಮಾಡುತ್ತವೆ. ಉಪದ್ರವಗಳಿಂದ ಸಾಯದೆ ಉಳಿದ ಜನರು ತಾವೇ ಮಾಡಿಕೊಂಡ ವಿಗ್ರಹಗಳನ್ನು ಬಿಟ್ಟು ದೇವರ ಕಡೆಗೆ ತಿರುಗಲಿಲ್ಲ; ಅವರು ದೆವ್ವಗಳ ಪೂಜೆಯನ್ನೂ ಬಂಗಾರ ಬೆಳ್ಳಿ ತಾಮ್ರ ಕಲ್ಲು ಮರ ಇವೇ ಮುಂತಾದವುಗಳಿಂದ ಮಾಡಲ್ಪಟ್ಟು ನೋಡಲಾರದೆ ಕೇಳಲಾರದೆ ನಡೆಯಲಾರದೆ ಇರುವ ವಿಗ್ರಹಗಳ ಪೂಜೆಯನ್ನೂ ಬಿಡಲಿಲ್ಲ. ಇದಲ್ಲದೆ ತಾವು ನಡೆಸುತ್ತಿದ್ದ ಕೊಲೆ [ಗರ್ಭಪಾತಗಳು] ಮಾಟ ಜಾರತ್ವ ಕಳ್ಳತನ ಇವುಗಳೊಳಗೆ ಒಂದನ್ನೂ ಬಿಟ್ಟು ಪ್ರಾಯಶ್ಚಿತ್ತ ಮಾಡಿಕೊಳ್ಳಲಿಲ್ಲ.

ಪ್ರಕಟನೆ 11:14-19: "ಎರಡನೆಯ ವಿಪತ್ತು ಕಳೆದುಹೋಯಿತು; ಇಗೋ, ಮೂರನೆಯ ವಿಪತ್ತು ಬೇಗನೆ ಬರುತ್ತದೆ. ಏಳನೆಯ ದೇವದೂತನು ತುತ್ತೂರಿಯನ್ನೂದಿದನು. ಆಗ ಪರಲೋಕದಲ್ಲಿ ಮಹಾಶಬ್ದಗಳುಂಟಾಗಿ – ಲೋಕದ ರಾಜ್ಯಾಧಿಕಾರವು ನಮ್ಮ ಕರ್ತನದೂ ಮತ್ತು ಯೇಸುಕ್ರಿಸ್ತನದೂ ಆಗಿದೆ. ಆತನು ಯುಗಯುಗಾಂತರಗಳಲ್ಲಿಯೂ ರಾಜ್ಯವನ್ನಾಳುವನು ಎಂದು ಹೇಳಿದವು. ತರುವಾಯ ದೇವರ ಸಮಕ್ಷಮದಲ್ಲಿ ತಮ್ಮ ತಮ್ಮ ಸಿಂಹಾಸನಗಳ ಮೇಲೆ ಕೂತಿರುವ ಇಪ್ಪತ್ತನಾಲ್ಕು ಮಂದಿ ಹಿರಿಯರು ಆತನಿಗೆ ಅಡ್ಡಬಿದ್ದು – ಕರ್ತನೇ, ಸರ್ವಶಕ್ತನಾದ ದೇವರೇ, ಸದಾ ಇರುವಾತನೇ, ನೀನು ನಿನ್ನ ಮಹಾ ಅಧಿಕಾರವನ್ನು ವಹಿಸಿಕೊಂಡು ಆಳಿದ್ದರಿಂದ ನಿನಗೆ ಕೃತಜ್ಞತಾಸ್ತುತಿಗಳನ್ನು ಸಲ್ಲಿಸುತ್ತೇವೆ. ಜನಾಂಗಗಳು ಕೋಪಿಸಿಕೊಂಡವು, ನಿನ್ನ ಕೋಪವೂ ಪ್ರಕಟವಾಯಿತು. ಸತ್ತವರು ತೀರ್ಪುಹೊಂದುವ ಸಮಯ ಬಂದಿದೆ; ನೀನು ನಿನ್ನ ದಾಸರಾದ ಪ್ರವಾದಿಗಳಿಗೂ ದೇವಜನರಿಗೂ ನಿನ್ನ ನಾಮಕ್ಕೆ ಭಯಪಡುವ ದೊಡ್ಡವರಿಗೂ ಚಿಕ್ಕವರಿಗೂ ಪ್ರತಿಫಲವನ್ನು ಕೊಟ್ಟು ಲೋಕನಾಶಕರನ್ನು ನಾಶಮಾಡುವಿ ಎಂದು ಆತನನ್ನು ಆರಾಧಿಸಿದರು. ಆಗ ಪರಲೋಕದಲ್ಲಿರುವ ದೇವಾಲಯವು ತೆರೆಯಿತು; ಆತನ ಆಲಯದಲ್ಲಿ ಆತನ ಒಡಂಬಡಿಕೆಯ ಮಂಜೂಷವು ಕಾಣಿಸಿತು; ಇದಲ್ಲದೆ ಮಿಂಚುಗಳೂ ವಾಣಿಗಳೂ ಗುಡುಗುಗಳೂ ಭೂಕಂಪವೂ ದೊಡ್ಡ ಆಲಿಕಲ್ಲಿನ ಮಳೆಯೂ ಉಂಟಾದವು."

ದೇವರ ವಾಯುಪಡೆಯು, ಆ ಹಾರುವ ತಟ್ಟೆಗಳು, ಆ ಯುಎಫ್‌ಒಗಳು, ದೇವರ ಈ ಅಂತಿಮ ತೀರ್ಪುಗಳಿಗಾಗಿ ಸಿದ್ಧತೆಯಲ್ಲಿ ಈಗ ಭೂಮಿಯ ಪರಿಶೀಲನೆ ನಡೆಸುತ್ತಿವೆ. ನಗುವುದಾದರೆ ನಕ್ಕುಬಿಡಿ, ಆದರೆ ದೇವದೂತರು ಹಾರಿಸುವ ಹಾರುವ ತಟ್ಟೆಗಳು ನಿಜವಾಗಿಯೂ ಇವೆ. ಲಕ್ಷಗಟ್ಟಲೆ ಜನರು ಅವನ್ನು ನೋಡಿದ್ದಾರೆ, ಮತ್ತು ಅವು ಬೇರೆ ಗ್ರಹದಿಂದ ಬಂದಿಲ್ಲ.

ದೇವರು ಏನನ್ನಾದರೂ ಮಾಡಿದಾಗ, ತಾನು ಅದನ್ನು ನಕಲು ಮಾಡಬಹುದೆಂಬಂತೆ ತೋರಿಸಲು ಸೈತಾನನು ಪ್ರಯತ್ನಿಸುತ್ತಾನೆ. ಆದಾಗ್ಯೂ, ಸೈತಾನನಿಗೆ ಇದರ ನಕಲು ಮಾಡಲು ಸಾಧ್ಯವಿಲ್ಲ. ಸೈತಾನನು ಯುಎಫ್‌ಒಗಳ ಸುಳ್ಳು ದರ್ಶನಗಳನ್ನು ಕಳುಹಿಸುತ್ತಾನೆ, ಮತ್ತು ಅವುಗಳನ್ನು ಹಾರಿಸುವ ಪಿಶಾಚಿಗಳು ದೊಡ್ಡ, ವಿರೂಪಗೊಂಡ ತಲೆಗಳಿರುವ ಚಿಕ್ಕ, ವಿರೂಪಗೊಂಡ ಮನುಷ್ಯರಂತೆ ಕಾಣುವಂತೆ ಮಾಡುತ್ತಾನೆ. ಒಂದು-ವಿಶ್ವ ಸರ್ಕಾರವಲ್ಲದ, ಯು.ಎನ್. ಅಲ್ಲದ, ಹೊಸ ವಿಶ್ವ ಪಂಥವಲ್ಲದ ದೇವರ ಸರ್ಕಾರವನ್ನು ದ್ವೇಷಿಸುವ ಮತ್ತು ದೇವರನ್ನು ವಿರೋಧಿಸುವ ಸಂಪೂರ್ಣ ಜನರೊಂದಿಗೆ ಭೂಮಿಯನ್ನು ತನ್ನ ದೇವದೂತರು

*(ಪುಟ 4 ರಲ್ಲಿ ಮುಂದುವರಿದಿದೆ)*

5 ಆದಿಕಾಂಡ 7:11-23, 1 ಪೇತ್ರನು 3:20 6 ದಾನಿಯೇಲನು 2:40, 7:19-25, 12:1, ಪ್ರಕಟನೆ13:2-8, 14:8, 16:13-14, 19-20, 17:1-9, 18:2-24 7 ಪ್ರಕಟನೆ 13:1-12, 17:1-9

## ಮಿಸೌರಿ

ಪ್ರೀತಿಯ ಸಹೋದರರೇ ಮತ್ತು ಸಹೋದರಿಯರೇ,

ನಮ್ಮ ಪ್ರಭುವಿನ ಅನುಗ್ರಹಕ್ಕೆ ಪಾತ್ರರಾಗಿರುವ ನಿಮಗೆ ನಮಸ್ಕಾರ. ಎಲ್ಲರೂ ಚೆನ್ನಾಗಿರಲಿ ಎಂದು ಪ್ರಾರ್ಥಿಸುತ್ತೇನೆ. ನಾನು ನಮ್ಮ ಪ್ರಭುವಿನ ಕೈಗಳಲ್ಲಿ ಸುರಕ್ಷಿತವಾಗಿ ಮತ್ತು ಸುಭದ್ರವಾಗಿದ್ದೇನೆ.

ಸಾಹಿತ್ಯವನ್ನು ಕಳುಹಿಸಿದುದಕ್ಕಾಗಿ ನಿಮಗೆ ಧನ್ಯವಾದಗಳು. ಪ್ಯಾಸ್ಟರ್ ಅಲಾಮೊ ಅವರ ಪುರಾವೆ "ಒಣಗಿದ ಎಲುಬುಗಳು" ಅದ್ಭುತವಾಗಿದೆ. ಜೀವಂತ ದೇವರ ಸೇವೆ ಮಾಡಲು ಅವರು ಒಂದು ಶ್ರೀಮಂತ ಮತ್ತು ಪ್ರಖ್ಯಾತಿಯ ಬದುಕಿನಿಂದ ದೂರ ನಡೆದರು ಎಂಬುದು ಗಮನಾರ್ಹವಾಗಿದೆ. ಅವರಂತಹ ಜನರು ಇನ್ನೂ ಹೆಚ್ಚು ಇದ್ದಿದ್ದರೆ ನಮ್ಮ ದೇಶ ಹೆಚ್ಚು ಉತ್ತಮ ಸ್ಥಿತಿಯಲ್ಲಿರುತ್ತಿತ್ತು.

ಪ್ಯಾಸ್ಟರ್ ಅಲಾಮೊ ಖಂಡಿತವಾಗಿ ಒಬ್ಬ ಶ್ರೇಷ್ಠ ದೇಶಭಕ್ತ. ನಾನು ಅವರ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಇಷ್ಟಪಡುತ್ತೇನೆ. ಪ್ಯಾಸ್ಟರ್ ಅಲಾಮೊ ಅವರ ಬಗ್ಗೆ ನೀವು ಕಳುಹಿಸುವ ಯಾವುದೇ ಸಾಹಿತ್ಯವನ್ನು ಮೆಚ್ಚುತ್ತೇನೆ.

ನೀವು ಮಾಡುವ ಎಲ್ಲದಕ್ಕಾಗಿ ಧನ್ಯವಾದಗಳು.

ಕ್ರಿಸ್ತ ಯೇಸುವಿನ ದಯೆಕೋರಿ,

ರಿಚರ್ಡ್ ಬೌಂಡ್ಸ್ ಬಾನ್ ಟೆರಾ, ಮಿಸೌರಿ



## ಮೇಲೆ ಆಕಾಶದಲ್ಲಿ ಅದ್ಭುತಕಾರ್ಯಗಳು ಹಾಗೂ ಕೆಳಗೆ ಭೂಮಿಯಲ್ಲಿ ಚಿಹ್ನೆಗಳು

*(ಪುಟ 3 ರಿಂದ ಮುಂದುವರಿದಿದೆ)*

ನಾಶ ಮಾಡುವುದಕ್ಕಿಂತ ಮೊದಲು ದೇವರು ತನ್ನ ಅಲೌಕಿಕ ವಾಯುಪಡೆಯನ್ನು ಈ ಪ್ರದೇಶದೊಳಗೆ ಕಳುಹಿಸುತ್ತಿದ್ದಾನೆ ಎಂಬ ಸತ್ಯವನ್ನು ನೀವು ಹೀಯಾಳಿಸುವಂತೆ ಮಾಡಲು ಈ ಅನುಕರಣೆಗಳನ್ನು ಮಾಡಲಾಗುತ್ತಿದೆ. ಈ ಹೊಸ ವಿಶ್ವ ಸರ್ಕಾರ ಸೈತಾನನ ಸರ್ಕಾರವಾಗಿದೆ. ಅದು ರೋಮ್‌ನಲ್ಲಿರುವ ಸುಳ್ಳು ಪ್ರವಾದಿಯು ಆಳುವ ಮೃಗ, ಮತ್ತು ಅದರ ನಾಯಕ ಸೈತಾನನ ಆತ್ಮವಾಗಿದೆ.[6] ವ್ಯಾಟಿಕನ್ ಸೈತಾನನ ಸಿಂಹಾಸನವಾಗಿದೆ.[7] ದೇವರು ಬೇರೆ ಯಾವುದೇ ಗ್ರಹದಲ್ಲಿ ಜನರನ್ನಾಗಲಿ ಅಥವಾ ಇತರ ಯಾವುದೇ ಜೀವಿಗಳನ್ನಾಗಲಿ ಎಂದೂ ಸೃಷ್ಟಿಸಿಲ್ಲ. ಹಾಗೆ ಆಲೋಚಿಸುವ ಜನರು ಪೆದ್ದರು!

ಪ್ರಕಟನೆ 15:5 ರಿಂದ 16:21 ಹೀಗೆಂದು ಹೇಳುತ್ತದೆ, “ಇದಾದ ಮೇಲೆ ನಾನು ನೋಡಿದಾಗ ಪರಲೋಕದಲ್ಲಿರುವ ದೇವದರ್ಶನ ಗುಡಾರದ ಪವಿತ್ರಸ್ಥಾನವು ತೆರೆಯಿತು; ಅದರೊಳಗಿಂದ ಏಳು [ಕೊನೆಯ] ಉಪದ್ರವಗಳನ್ನು ಕೈಯಲ್ಲಿ ಹಿಡಿದಿರುವ ಆ ಏಳು ಮಂದಿ ದೇವದೂತರು ಬಂದರು; ಅವರು ಪ್ರಕಾಶವೂ ನಿರ್ಮಲವೂ ಆದ ನಾರುಮಡಿಯನ್ನು ಧರಿಸಿಕೊಂಡಿದ್ದರು; ತಮ್ಮ ಎದೆಗಳಿಗೆ ಚಿನ್ನದ ಪಟ್ಟಿಯನ್ನು ಕಟ್ಟಿಕೊಂಡಿದ್ದರು. ನಾಲ್ಕು [ದಿವ್ಯ] ಜೀವಿಗಳಲ್ಲಿ ಒಂದು ಈ ಏಳು ಮಂದಿ ದೇವದೂತರಿಗೆ ಯುಗಯುಗಾಂತರಗಳಲ್ಲಿಯೂ ಜೀವಿಸುವಾತನಾದ ದೇವರ ರೌದ್ರದಿಂದ ತುಂಬಿದ್ದ ಏಳು ಚಿನ್ನದ ಪಾತ್ರೆಗಳನ್ನು ಕೊಟ್ಟಿತು. ದೇವರ ತೇಜಸ್ಸಾನ್ನಿಧ್ಯದಿಂದಲೂ ಆತನ ಶಕ್ತಿಯಿಂದಲೂ ಉಂಟಾದ ಹೊಗೆಯಿಂದ ಪವಿತ್ರಸ್ಥಾನವು ತುಂಬಿದ ಕಾರಣ ಆ ಏಳು ಮಂದಿ ದೇವದೂತರ ಕೈಯಲ್ಲಿದ್ದ ಏಳು [ಕೊನೆಯ] ಉಪದ್ರವಗಳು ತೀರುವ ತನಕ ಆ ಪವಿತ್ರಸ್ಥಾನದೊಳಗೆ ಪ್ರವೇಶಿಸುವದಕ್ಕೆ ಯಾರಿಂದಲೂ ಆಗಲಿಲ್ಲ. ಆಗ ಪವಿತ್ರಸ್ಥಾನದಿಂದ ಬಂದ ಮಹಾ ಶಬ್ದವನ್ನು ಕೇಳಿದೆನು. ಅದು ಆ ಏಳು ಮಂದಿ ದೇವದೂತರಿಗೆ – ನೀವು ಹೋಗಿ ಆ ಏಳು ಪಾತ್ರೆಗಳಲ್ಲಿರುವ ದೇವರ ರೌದ್ರವನ್ನು ಭೂಮಿಯ ಮೇಲೆ ಹೊಯ್ಯಿರಿ ಎಂದು ಹೇಳಿತು. ಆಗ ಮೊದಲನೆಯವನು ಹೊರಟು ತನ್ನ ಪಾತ್ರೆಯಲ್ಲಿದ್ದದ್ದನ್ನು ಭೂಮಿಗೆ ಹೊಯ್ದನು; ಕೂಡಲೇ ಮೊದಲನೆಯ ಮೃಗದ ಗುರುತನ್ನು ಹೊಂದಿ ಅದರ ವಿಗ್ರಹಕ್ಕೆ ನಮಸ್ಕಾರಮಾಡುವ ಮನುಷ್ಯರ ಮೈಮೇಲೆ ಕೆಟ್ಟ ಉರಿಹುಣ್ಣು ಎದ್ದಿತು.

ಎರಡನೆಯವನು ತನ್ನ ಪಾತ್ರೆಯಲ್ಲಿದ್ದುದ್ದನ್ನು ಸಮುದ್ರದ ಮೇಲೆ ಹೊಯ್ದನು. ಅದರ ನೀರು ಸತ್ತವನ ರಕ್ತದ ಹಾಗಾಯಿತು; ಮತ್ತು ಸಮುದ್ರದಲ್ಲಿದ್ದ ಜೀವಜಂತುಗಳೆಲ್ಲವೂ ಸತ್ತುಹೋದವು. ಮೂರನೆಯವನು ತನ್ನ ಪಾತ್ರೆಯಲ್ಲಿದ್ದುದ್ದನ್ನು ನದಿಗಳ ಮೇಲೆಯೂ ನೀರಿನ ಬುಗ್ಗೆಗಳ ಮೇಲೆಯೂ ಹೊಯ್ದನು; ಅವುಗಳ ನೀರು ರಕ್ತವಾಯಿತು. ಆ ಮೇಲೆ ಜಲಾಧಿಪತಿಯಾದ ದೂತನು – ಸದಾ ಇರುವಾತನೇ, ಪರಿಶುದ್ಧನೇ, ನೀನು ಹೀಗೆ ತೀರ್ಪುಮಾಡಿದ್ದರಲ್ಲಿ ನೀತಿ ಸ್ವರೂಪನಾಗಿದ್ದೀ. ಅವರು ದೇವಜನರ ಮತ್ತು ಪ್ರವಾದಿಗಳ ರಕ್ತವನ್ನು ಸುರಿಸಿದರು; ನೀನು ಅವರಿಗೆ ರಕ್ತವನ್ನೇ ಕುಡಿಯುವುದಕ್ಕೆ ಕೊಟ್ಟಿದ್ದೀ; ಇದಕ್ಕೆ ಅವರು ಪಾತ್ರರು ಎಂದು ಹೇಳುವುದನ್ನು ಕೇಳಿದೆನು. ಆ ಮೇಲೆ ಯಜ್ಞವೇದಿಯಿಂದ ಮತ್ತೊಬ್ಬನು ಮಾತಾಡುತ್ತಾ – ದೇವರಾದ ಕರ್ತನೇ, ಸರ್ವಶಕ್ತನೇ, ನಿನ್ನ ನ್ಯಾಯತೀರ್ಪುಗಳು ಸತ್ಯವೂ ನ್ಯಾಯವೂ ಆಗಿರುವುದು ನಿಜ ಎಂದು ಹೇಳುವುದನ್ನು ಕೇಳಿದೆನು. ನಾಲ್ಕನೆಯವನು ತನ್ನ ಪಾತ್ರೆಯಲ್ಲಿದ್ದುದನ್ನು ಸೂರ್ಯನ ಮೇಲೆ ಹೊಯ್ದನು; ಆಗ ಅವನಿಗೆ ಬೆಂಕಿಯಿಂದ ಮನುಷ್ಯರನ್ನು ಕಂದಿಸುವ ಶಕ್ತಿಯು ಕೊಡಲ್ಪಟ್ಟಿತು. ಮನುಷ್ಯರು ಬಲವಾದ ಕಾವಿನಿಂದ ಕಂದಿಹೋದರೂ ಅವರು ದೇವರನ್ನು ಘನಪಡಿಸುವ ಹಾಗೆ ಮಾನಸಾಂತರಮಾಡಿಕೊಳ್ಳದೆ ಈ ಉಪದ್ರವಗಳ ಮೇಲೆ ಅಧಿಕಾರವುಳ್ಳ ದೇವರ ನಾಮವನ್ನು ದೂಷಿಸಿದರು. ಐದನೆಯವನು ತನ್ನ ಪಾತ್ರೆಯಲ್ಲಿದ್ದುದನ್ನು ಮೃಗದ ಸಿಂಹಾಸನದ [ರೋಮ್‌ನ ವ್ಯಾಟಿಕನ್] ಮೇಲೆ ಹೊಯ್ಯಲು ಅದರ ರಾಜ್ಯವು ಕತ್ತಲಾಯಿತು. ಜನರು ತಮಗಾದ ಕಷ್ಟದ ದೆಸೆಯಿಂದ ತಮ್ಮ ನಾಲಿಗೆಗಳನ್ನು ಕಚ್ಚಿಕೊಂಡು ತಮ್ಮ ಕೃತ್ಯಗಳ ವಿಷಯದಲ್ಲಿ ಪಶ್ಚಾತ್ತಾಪಪಟ್ಟುಕೊಳ್ಳದೆ ತಮ್ಮ ಕಷ್ಟಗಳ ದೆಸೆಯಿಂದಲೂ ಹುಣ್ಣುಗಳ ದೆಸೆಯಿಂದಲೂ ಪರಲೋಕ ದೇವರನ್ನು ದೂಷಿಸಿದರು [ಇಂದಿನಂತೆಯೇ]. ಆರನೆಯವನು ತನ್ನ ಪಾತ್ರೆಯಲ್ಲಿದ್ದದ್ದನ್ನು ಯೂಫ್ರೇಟೀಸ್ ಎಂಬ ಮಹಾ ನದಿಯ ಮೇಲೆ ಹೊಯ್ಯಲು ಅದರ ನೀರು ಇಂಗಿ ಹೋಯಿತು; ಇದರಿಂದ ಮೂಡಣ ದಿಕ್ಕಿನಿಂದ ಬರುವ ರಾಜರಿಗೆ ಮಾರ್ಗವು ಸಿದ್ಧವಾಯಿತು. ಮತ್ತು ಘಟಸರ್ಪದ ಬಾಯಿಯಿಂದ [ಸೈತಾನ], ಮೃಗದ ಬಾಯಿಯಿಂದ [ಕ್ರಿಸ್ತವಿರೋಧಿ, ಒಂದು-ವಿಶ್ವ ಸರ್ಕಾರ, ಯು.ಎನ್., ರೋಮ್‌ನಲ್ಲಿ ಮುಖ್ಯ ಕಚೇರಿ ಹೊಂದಿರುವ ಹೊಸ ವಿಶ್ವ ಪಂಥ, ಅದುವೆ ವ್ಯಾಟಿಕನ್] ಸುಳ್ಳುಪ್ರವಾದಿ [ವ್ಯಾಟಿಕನ್, ರೋಮನ್ ಕ್ಯಾಥೊಲಿಕ್ ಕುಪಂಥ] ಇವರ ಬಾಯಿಗಳಿಂದ ಕಪ್ಪೆಗಳಂತಿದ್ದ ಮೂರು ಅಶುದ್ಧಾತ್ಮಗಳು ಬರುವದನ್ನು ಕಂಡೆನು. ಇವು ಮಹತ್ಕಾರ್ಯಗಳನ್ನು ಮಾಡುವ ದೆವ್ವಗಳು; ಭೂಲೋಕದಲ್ಲೆಲ್ಲಿಯೂ ಇರುವ ರಾಜರ ಬಳಿಗೆ ಹೋಗಿ ಸರ್ವಶಕ್ತನಾದ ದೇವರ ಮಹಾದಿನದಲ್ಲಾಗುವ ಯುದ್ಧಕ್ಕೆ ಅವರನ್ನು ಕೂಡಿಸುವವು.

“(ಇಗೋ, ಕಳ್ಳನು ಬರುವಂತೆ ಬರುತ್ತೇನೆ; ತಾನು ವಿವಸ್ತ್ರವಾಗಿ ತಿರುಗಾಡಿ ಅವಮಾನಕ್ಕೆ ಗುರಿಯಾದೇನೆಂದು ಎಚ್ಚರವಾಗಿದ್ದು ತನ್ನ ವಸ್ತ್ರಗಳನ್ನು [ತನ್ನ ರಕ್ಷಣೆಯನ್ನು[8]] ಕಾಪಾಡಿಕೊಳ್ಳುವವನು ಧನ್ಯನು.) ಆ ದೆವ್ವಗಳು ಭೂರಾಜರನ್ನು ಇಬ್ರಿಯ ಭಾಷೆಯಲ್ಲಿ ಹರ್ಮಗೆದೋನ್ ಎಂಬ ಹೆಸರುಳ್ಳ ಸ್ಥಳಕ್ಕೆ ಕೂಡಿಸಿದವು. ಏಳನೆಯವನು ತನ್ನ ಪಾತ್ರೆಯಲ್ಲಿದ್ದುದ್ದನ್ನು ವಾಯುಮಂಡಲದ ಮೇಲೆ ಹೊಯ್ಯಲು ದೇವಾಲಯದಲ್ಲಿರುವ ಸಿಂಹಾಸನದ ಕಡೆಯಿಂದ ಮಹಾ ಶಬ್ದವು ಉಂಟಾಗಿ – ಆಯಿತು ಎಂದು ಹೇಳಿತು. ಆಗ ಮಿಂಚುಗಳೂ ವಾಣಿಗಳೂ ಗುಡುಗುಗಳೂ ಉಂಟಾದವು; ಇದಲ್ಲದೆ ಮಹಾ ಭೂಕಂಪವಾಯಿತು; ಮನುಷ್ಯರು ಭೂಮಿಯ ಮೇಲೆ ಇದ್ದಂದಿನಿಂದ ಅಂಥ ದೊಡ್ಡ ಭೂಕಂಪವಾಗಿರಲಿಲ್ಲ. ಮಹಾ ಪಟ್ಟಣವು ಮೂರು ಭಾಗವಾಯಿತು; ರಾಷ್ಟ್ರಗಳ ಪಟ್ಟಣಗಳು ಬಿದ್ದುಹೋದವು. ಇದಲ್ಲದೆ ದೇವರು ದೊಡ್ಡ ಬಾಬೆಲನ್ನು ಜ್ಞಾಪಿಸಿಕೊಂಡು ತನ್ನ ಉಗ್ರಕೋಪವೆಂಬ ದ್ರಾಕ್ಷಾರಸದ ಪಾತ್ರೆಯನ್ನು ಅವಳಿಗೆ ಕುಡಿಯಲು ಕೊಟ್ಟನು. ಆಗ ದ್ವೀಪಗಳೆಲ್ಲಾ ಓಡಿಹೋದವು; ಬೆಟ್ಟಗಳು ಸಿಕ್ಕದೆ ಹೋದವು. ಮತ್ತು ಆಕಾಶದಿಂದ ಮನುಷ್ಯರ ಮೇಲೆ ದೊಡ್ಡ ಆಲಿಕಲ್ಲಿನ ಮಳೆ ಸುರಿಯಿತು; ಒಂದೊಂದು ಕಲ್ಲೂ ಹೆಚ್ಚುಕಡಿಮೆ ನಾಲ್ಕು ಮಣ ತೂಕವಾಗಿತ್ತು. ಆ ಆಲಿಕಲ್ಲಿನ ಮಳೆಯ ಕಾಟವು ಬಹಳ ಹೆಚ್ಚಾಗಿದ್ದುದರಿಂದ ಆ ಮಳೆಯಲ್ಲಿ ಸಿಕ್ಕಿಕೊಂಡ ಮನುಷ್ಯರು ದೇವರನ್ನು

8 ಮತ್ತಾಯ 8:10-12, 13:37-43, 47-50, 22:8-14, 24:42-51, 25:1-13, ಲೂಕ 9:23-26, 62, 12:35-48, 14:15-35, ರೋಮಾಪುರದವರಿಗೆ 8:35-39, 2 ಕೊರಿಂಥದವರಿಗೆ 5:1-4, ಪ್ರಕಟನೆ 3:1-3, 8-22

## ಟೋಗೊ

*ಫ್ರೆಂಚ್ ನಿಂದ ಅನುವಾದಿಸಲಾಗಿದೆ*

ಟೋನಿ ಅಲಾಮೊ ಕ್ರಿಸ್ಚಿಯನ್ ಮಿನಿಸ್ಟ್ರಿಯಿಂದ ಪ್ರೀತಿಯ ಪ್ಯಾಸ್ಟರ್ ಅವರಿಗೆ ನಮಸ್ಕಾರ.

ನಾನು ಫೆಬ್ರವರಿ 23, 2013ರಂದು ಒಂದು ಪ್ಯಾಕೇಜ್ ಪಡೆದೆನು. ಈ ಪ್ಯಾಕೇಜಿನಲ್ಲಿ ಮೂರು ಫ್ರೆಂಚ್ ಬೈಬಲ್ಲುಗಳು, ಐದು ಮೆಸ್ಸೈಅ ಪುಸ್ತಕಗಳು, ಎರಡು ಟಿ – ಷರ್ಟುಗಳು, ಮತ್ತು ಸಾಹಿತ್ಯದ ಸಾವಿರಾರು ತುಣುಕುಗಳು ಇದ್ದವು. ಈ ಸಾಮಗ್ರಿಗಳು ಸೇರಬೇಕಾದಲ್ಲಿ ಬೇಗನೆ ಸೇರುವುದಕ್ಕಾಗಿ ಅಗತ್ಯವಿರುವ ಎಲ್ಲವನ್ನೂ ನಾವು ಮಾಡುತ್ತೇವೆ.

ಟೋಗೊದಲ್ಲಿರುವ ನನ್ನ ಸಹೋದ್ಯೋಗಿಗಳು ನಿಮಗೆ ಅವರ ನಮಸ್ಕಾರಗಳನ್ನು ತಿಳಿಸಲು ಮತ್ತು ಆತ್ಮಗಳ ರಕ್ಷಣೆಯಲ್ಲಿ ನಿಮ್ಮ ಸದ್ಭಾವನೆಗಾಗಿ ನಿಮಗೆ ಧನ್ಯವಾದಗಳನ್ನು ಸಲ್ಲಿಸಲು ನನಗೆ ಹೇಳುತ್ತಿದ್ದಾರೆ. ನಮ್ಮ ಪ್ರಭು ಯೇಸುವಿನ ಹೆಸರಿನಲ್ಲಿ ನಿಮಗೆಲ್ಲರಿಗೂ ಅನುಗ್ರಹವಾಗಲಿ.

ಆಮೆನ್!

ಇಲ್ಲಿ ಟೋಗೊದಲ್ಲಿ ನಮ್ಮ ಅಗತ್ಯತೆಗಳು ಅಪಾರವಾಗಿವೆ. ಸಾಧ್ಯವಿದ್ದರೆ, ನಮಗೆ ಫ್ರೆಂಚ್ ಬೈಬಲ್ಲುಗಳು, ಬಹಳಷ್ಟು ಸಾಹಿತ್ಯಗಳಂಥ ಇನ್ನಷ್ಟು ಸುವಾರ್ತಾ ಸಾಮಗ್ರಿಗಳನ್ನು ದೊಡ್ಡ ಪ್ರಮಾಣದ ಪ್ಯಾಕೇಜುಗಳಲ್ಲಿ ಕಳುಹಿಸುವುದನ್ನು ಮುಂದುವರಿಸಿರಿ. ಸಾಹಿತ್ಯವು ನಮಗೆ ಸಿಕ್ಕಿದಾಗ ಬೇಗನೆ ಹಂಚಿಹೋಗುತ್ತದೆ. ಟೋಗೊದಲ್ಲಿನ ಅಲಾಮೊ ಪ್ಯಾಸ್ಟರುಗಳಿಂದ ಸುವಾರ್ತೆಯ ಬರಹಗಳನ್ನು ಓದಲು ಜನರಿಗೆ ಬಹಳಷ್ಟು ಸಾಹಿತ್ಯ ಬೇಕಾಗಿದೆ. ಅನೇಕ ಓದುಗರು ದ ಮೆಸ್ಸೈಅ ಎಂಬ ಈ ಚಿಕ್ಕ ಪುಸ್ತಕದ ಕಾರಣ ತಮ್ಮ ಬದುಕುಗಳನ್ನು ಯೇಸುವಿಗೆ ಸಮರ್ಪಿಸುತ್ತಿದ್ದಾರೆ.

ಹೃತ್ಪೂರ್ವಕವಾಗಿ ನಿಮ್ಮ,

ಅಚೌ ಕೋಕು — ಟೋಗೊದ ಟೋನಿ ಅಲಾಮೊ ಮಿನಿಸ್ಟ್ರಿ

ದೂಷಿಸಿದರು" (ಪ್ರಕಟನೆ 16:14-21).

ಕ್ರೈಸ್ತಮತೀಯ ಜಗತ್ತು ಮಾತ್ರವಲ್ಲದೆ ಜಗತ್ತಿನ ಸಂಪೂರ್ಣ ಜನಸಮುದಾಯವು ಅಗೋಚರವಾದ ಲೋಕದ ಬಗ್ಗೆ, ದೇವದೂತರ ಲೋಕದ ಬಗ್ಗೆ ಅರಿತುಕೊಳ್ಳುವ ಅಗತ್ಯ ಬಹಳವಿದೆ. ಒಳ್ಳೆಯ ದೇವದೂತರಿದ್ದಾರೆ ಮತ್ತು ಕೆಟ್ಟ ದೇವದೂತರಿದ್ದಾರೆ. ಒಳ್ಳೆಯ ದೇವದೂತರು ದೇವರ ದೂತರಾಗಿದ್ದು, "ಕಾವಲಿಗರು" ಎಂದು ಕರೆಯಲ್ಪಡುತ್ತಾರೆ. ಅವರು ನೀವು ಮತ್ತು ನಾನು ಮಾಡುವ ಪ್ರತಿಯೊಂದು ಕೆಲಸವನ್ನು ಗಮನಿಸುತ್ತಿದ್ದಾರೆ, ಮತ್ತು ನೀವು ಮತ್ತು ನಾನು ಹೇಳುವ ಪ್ರತಿಯೊಂದು ಪದವನ್ನು ಕೂಡ ಅವರು ಕೇಳುತ್ತಿದ್ದಾರೆ.

ಆದಿಕಾಂಡದಲ್ಲಿ, ಮೂಲ ಪಿತೃವಾದ ಅಬ್ರಹಾಮನು, ತನ್ನ ಮಗನಾದ ಇಸಾಕನಿಗೆ ಹೆಣ್ಣು ಹುಡುಕಲು ಅಬ್ರಹಾಮನ ಸ್ವದೇಶವಾದ ಮೆಸೊಪೊಟೊಮಿಯಕ್ಕೆ ಹೋಗಬೇಕೆಂದು ತನ್ನ ಸೇವಕನಿಗೆ ಆದೇಶಿಸಿದನು. ಅವನು ತನ್ನ ಸೇವಕನಿಗೆ, "ನನ್ನ ತಂದೆಯ ಮನೆಯಿಂದಲೂ ನಾನು ಹುಟ್ಟಿದ ದೇಶದಿಂದಲೂ ನನ್ನನ್ನು ಕರೆತಂದು ನಿನ್ನ ಸಂತತಿಗೆ ಈ ದೇಶವನ್ನು ಕೊಡುವೆನೆಂದು ಪ್ರಮಾಣ ಮಾಡಿ ಹೇಳಿದ ಪರಲೋಕದೇವರಾದ ಯೆಹೋವನು ನಿನ್ನ ಮುಂದೆ ತನ್ನ ದೂತನನ್ನು [ತನ್ನ ಕಾವಲಿಗನನ್ನು] ಕಳುಹಿಸಿ ನೀನು ಅಲ್ಲಿಂದ ನನ್ನ ಮಗನಿಗೋಸ್ಕರ ಹೆಣ್ಣನ್ನು ತೆಗೆದುಕೊಳ್ಳುವಂತೆ ಅನುಕೂಲಮಾಡುವವನು" (ಆದಿಕಾಂಡ 24:7) ಎಂದು ಹೇಳಿದನು. ಮತ್ತು ಅವನ ಸೇವಕನ ಮುಂದೆ ಆತ ತನ್ನ ದೂತನನ್ನು ನಿಜವಾಗಿಯೂ ಕಳುಹಿಸಿದರು, ಮತ್ತು ಆ ಸೇವಕನಿಗೆ ಬೆತೂವೇಲನ ಮಗಳಾದ ರೆಬೆಕ್ಕ ಸಿಕ್ಕಿದಳು. ಯಾಷಾರ್ ಗ್ರಂಥದ ಅಧ್ಯಾಯ 24 ಶ್ಲೋಕ 40 ರ ಪ್ರಕಾರ ರೆಬೆಕ್ಕ ಹತ್ತು ವರ್ಷದವಳಾಗಿದ್ದಳು. ಯಾಷಾರ್ ಗ್ರಂಥದ ಅಧ್ಯಾಯ 24 ಶ್ಲೋಕ 45 ರ ಪ್ರಕಾರ ಇಸಾಕನು ನಲವತ್ತು ವರ್ಷದವನಾಗಿದ್ದನು. ಇದನ್ನು ಆದಿಕಾಂಡ 25:20ರಲ್ಲಿ ಕೂಡ ದೃಢೀಕರಿಸಲಾಗಿದೆ. ಇಸಾಕನಿಂದ ಇಸ್ರಾಯೇಲಿಗೆ ಜನ್ಮ ಕೊಟ್ಟವಳು ರೆಬೆಕ್ಕ. ಅವಳು ಏಸಾವ ಮತ್ತು ಯಾಕೋಬರಿಗೆ ಜನ್ಮ ಕೊಟ್ಟಳು. ಯಾಕೋಬನು ಮಹನಯಿಮ್‌ನಲ್ಲಿ ದೇವರೊಂದಿಗೆ ಹೋರಾಡಿ ಗೆದ್ದುದರಿಂದ ಆತ ಅವನ ಹೆಸರನ್ನು ಇಸ್ರಾಯೇಲ್ ಎಂದು ಬದಲಾಯಿಸಿದರು (ಆದಿಕಾಂಡ 32:24-28).

ಇಸ್ರಾಯೇಲ್ ದೇಶವನ್ನು ಕೆಂಪು ಸಮುದ್ರದ ಮಧ್ಯದಿಂದ ಒಣ ನೆಲದ ಮೇಲೆ ಕರೆದುಕೊಂಡು ಹೋದವರು ದೇವರ ದೂತರು, ಮತ್ತು ಈ ಘಟನೆಗಿಂತ ಮೊದಲು, ಐಗುಪ್ತ್ಯರ ಪಾಳೆಯ ಮತ್ತು ಇಸ್ರಾಯೇಲ್ ದೇಶದ ಪಾಳೆಯಗಳ ನಡುವೆ ಬಂದು ಇಸ್ರಾಯೇಲ್ ದೇಶದ ಹಿಂದೆ ಹೋದವರು ದೇವರ ದೂತರು (ವಿಮೋಚನಕಾಂಡ 14:15-20).

ಆದಿಕಾಂಡ 19:1 ಹೀಗೆಂದು ಹೇಳುತ್ತದೆ, "ಆ ದೂತರಿಬ್ಬರೂ ಸಾಯಂಕಾಲದಲ್ಲಿ ಸೊದೋಮಿಗೆ ಬಂದಾಗ..." ಆದಿಕಾಂಡ 19:12-13ರಲ್ಲಿ, ಇಬ್ಬರು ದೂತರು ಲೋಟನಿಗೆ – "ಇಲ್ಲಿ ನಿನಗೆ ಇನ್ನಾರಿದ್ದಾರೆ [ಬಂಧು-ಬಳಗದವರು]? ಅಳಿಯಂದಿರನ್ನೂ ಗಂಡು ಹೆಣ್ಣು ಮಕ್ಕಳನ್ನೂ ಪಟ್ಟಣದಲ್ಲಿ ನಿನಗಿರುವ ಬೇರೆ ಎಲ್ಲರನ್ನೂ ಊರಹೊರಕ್ಕೆ ಕರೆದುಕೊಂಡು ಬಾ. ನಾವು [ದೇವದೂತರು] ಈ ಸ್ಥಳವನ್ನು ನಾಶಮಾಡುವುದಕ್ಕೆ ಬಂದವರು. ಇಲ್ಲಿಯವರ ವಿಷಯವಾಗಿ ಬಲು ದೊಡ್ಡ ಮೊರೆಯು ಯೆಹೋವನಿಗೆ ಮುಟ್ಟಿದ್ದರಿಂದ ಇವರನ್ನು ನಾಶಮಾಡುವದಕ್ಕಾಗಿ ಆತನು ನಮ್ಮನ್ನು ಕಳುಹಿಸಿದ್ದಾನೆ" ಎಂದು ಹೇಳಿದರು.

ಸೊದೋಮ್ ಮತ್ತು ಗೊಮೋರ ಮತ್ತು ಅವುಗಳ ಸುತ್ತಲಿನ ಪಟ್ಟಣಗಳನ್ನು ನಾಶಮಾಡಿದ್ದು ಕೇವಲ ಇಬ್ಬರು ದೇವದೂತರು (ಆದಿಕಾಂಡ 19:12-29) ಮತ್ತು ಸನ್ಹೇರೀಬನ ಸಂಪೂರ್ಣ ಸೈನ್ಯವನ್ನು ಕೇವಲ ಒಬ್ಬನೇ ದೇವದೂತನು ಕೊಂದನು. ತನ್ನ ಸೈನ್ಯವು ಎಷ್ಟು ಪ್ರಬಲವಾಗಿದೆ ಎಂದು ಸನ್ಹೇರೀಬನು ಇಸ್ರಾಯೇಲಿನ ಬಳಿ ಬಡಾಯಿ ಕೊಚ್ಚಿಕೊಂಡ ನಂತರ 2 ಅರಸುಗಳು 19:35, "ಅದೇ ರಾತ್ರಿಯಲ್ಲಿ ಯೆಹೋವನ ದೂತನು [ಒಬ್ಬ ದೂತನು] ಹೊರಟುಬಂದು ಅಶ್ಶೂರ್ಯರ ಪಾಳೆಯದಲ್ಲಿ ಒಂದು ಲಕ್ಷದ ಎಂಭತ್ತೈದು ಸಾವಿರ [185,000] ಮಂದಿ ಸೈನಿಕರನ್ನು ಸಂಹರಿಸಿದನು. ಅವರು ಬೆಳಿಗ್ಗೆ ಎದ್ದು ನೋಡುವಷ್ಟರಲ್ಲಿ ಪಾಳೆಯದ ತುಂಬಾ ಹೆಣಗಳಿದ್ದವು" ಎಂದು ಹೇಳಲಾಗುತ್ತದೆ.


ಒಬ್ಬ ದೇವದೂತನು ಸಂಪೂರ್ಣ ಐಗುಪ್ತ್ಯ ಸೈನ್ಯವನ್ನು ನಾಶ ಮಾಡಿದನು, ಮತ್ತು ಒಬ್ಬ ದೇವದೂತನು ಸನ್ಹೇರೀಬನ ಸಂಪೂರ್ಣ ಸೈನ್ಯವನ್ನು ನಾಶ ಮಾಡಿದನು. ಏಳು ದೇವದೂತರು ಸಂಪೂರ್ಣ ಭೂಮಿಯನ್ನು ನಾಶ ಮಾಡುತ್ತಾರೆ. ದೇವರ ದೂತರು ಹಾರಿಸುವ ಯುಎಫ್‌ಒಗಳ, ಹಾರುವ ತಟ್ಟೆಗಳ ನೂರಾರು ದರ್ಶನಗಳಿಂದ ಜನರು ಇನ್ನೂ ಎಷ್ಟು ಹೆದರಿಕೊಳ್ಳಬೇಕು? ಅವು ಈಗ, ಎಚ್ಚರಿಕೆಯ ಸೂಚನೆಗಳಾಗಿ, ಭೂಮಿಯ ಮೇಲೆ ನ್ಯೂಯಾರ್ಕ್; ನ್ಯೂಜರ್ಸಿ, ನ್ಯೂ ಒರ್ಲೀನ್ಸ್, ಲೂಯಿಸಿಯಾನ; ಜೊಪ್ಲಿನ್, ಮಿಸೌರಿ; ಹೈಟಿ; ಇಂಡೋನೇಷ್ಯಾ; ಮತ್ತು ಜಪಾನ್ ಗಳಂಥ ನಿರ್ದಿಷ್ಟ ಸ್ಥಳಗಳನ್ನು ನಾಶ ಮಾಡುತ್ತಿವೆ. ಅವು ಜಗತ್ತಿನಾದ್ಯಂತ ನೂರಾರು ಇತರ ಸ್ಥಳಗಳನ್ನು ನಾಶ ಮಾಡುತ್ತಿವೆ. ಕರ್ತನು ಜಗತ್ತಿನಾದ್ಯಂತ ಪಟ್ಟಣಗಳನ್ನು ಮತ್ತು ಜನರನ್ನು ನಾಶ ಮಾಡಲು ದೂತರನ್ನು ಕಳುಹಿಸುತ್ತಿದ್ದಾನೆ.

ಮತ್ತಾಯ 24:21-22 ಹೀಗೆಂದು ಹೇಳುತ್ತದೆ, "ಅಂಥ ಸಂಕಟವು ಲೋಕ ಹುಟ್ಟಿದಂದಿನಿಂದ ಮೊದಲುಗೊಂಡು ಇಂದಿನವರೆಗೂ ಆಗಲಿಲ್ಲ. ಇನ್ನು ಮೇಲೆಯೂ ಆಗುವುದಿಲ್ಲ. [ಕರ್ತನು] ಆ ದಿನಗಳನ್ನು ಕಡಿಮೆಮಾಡದಿದ್ದರೆ ಒಂದು ನರಪ್ರಾಣಿಯೂ ಉಳಿಯದು; ಆದರೆ ತಾನು ಆಯ್ದುಕೊಂಡವರಿಗೋಸ್ಕರ ಆ ದಿನಗಳನ್ನು ಕಡಿಮೆ ಮಾಡುವನು."

ಇದು ಈಗ ಲೋಕದ ಅಂತ್ಯ. ಇತರರು ಲೋಕದ ಅಂತ್ಯ ಎಂದು ಹೇಳಿ, ದೇವರು ಆಯ್ಕೆ ಮಾಡಿದ ನಿಖರವಾದ ಸಮಯ ತಮಗೆ ತಿಳಿದಿದೆ ಎಂಬಂತೆ ಒಂದು ದಿನಾಂಕವನ್ನು ಕೊಟ್ಟರು. ನಾನು ಹಾಗೆ ಮಾಡುವುದಿಲ್ಲ, ಆದರೆ ಇದು ಕೊನೆ ಎಂದು ನಾನು ಖಂಡಿತವಾಗಿ ಹೇಳುತ್ತೇನೆ. ಪರಲೋಕದ

*(ಪುಟ 8ರಲ್ಲಿ ಮುಂದುವರಿದಿದೆ)*

## ಲ್ಯಾಕ್ಲನ್ ಜಾನ್ಸನ್ ಅವರ ಪುರಾವೆ



*ಸಹೋದರ ಲ್ಯಾಕ್ಲನ್ ಜಾನ್ಸನ್*

ನಾನು ಹುಟ್ಟಿ ಬೆಳೆದಿದ್ದು ಆಸ್ಟ್ರೇಲಿಯದಲ್ಲಿ, ಮತ್ತು ನನ್ನ ತಂದೆ-ತಾಯಿ ಧರ್ಮಶ್ರದ್ಧೆಯುಳ್ಳವರಾಗಿರಲಿಲ್ಲ, ಮತ್ತು ಕ್ರೈಸ್ತಮತೀಯರಂತೂ ಖಂಡಿತ ಆಗಿರಲಿಲ್ಲ. ಕ್ರೈಸ್ತ ಧರ್ಮದಲ್ಲಿ ನಾನು ಯಾವುದೇ ಮಾರ್ಗದರ್ಶನವನ್ನು ಪಡೆದಿರಲಿಲ್ಲ. ನಾನು ಅದೃಷ್ಟವಂತ ಎಂದು ಹೇಳಬಹುದೋ ಏನೋ, ಏಕೆಂದರೆ ನಾನು ಅವಧಿಗೆ ಬಹಳ ಮೊದಲೇ ಹುಟ್ಟಿದೆ ಮತ್ತು ಅದೃಷ್ಟವಶಾತ್ ಜೀವಂತವಾಗಿದ್ದೆ. ನನಗೆ ಸ್ವಲ್ಪ ಮಟ್ಟಿನ ಮಿದುಳಿನ ಲಕ್ವ (ಸೆರೆಬ್ರಲ್ ಪಾಲ್ಸಿ) ಮತ್ತು ಸ್ನಾಯುಕ್ಷಯ (ಮಸ್ಕ್ಯುಲರ್ ಡಿಸ್ಟ್ರೊಫಿ) ಇತ್ತು.

ನಾನು ಇನ್ನೂ ಚಿಕ್ಕವನಾಗಿದ್ದಾಗ ಒಬ್ಬ ಗೆಳೆಯನ ಮನೆಯಲ್ಲಿದ್ದೆ. ಇದು ಸಾಕಷ್ಟು ಸ್ಪಷ್ಟವಾಗಿದೆ, ಆದರೆ ಪರಲೋಕದಲ್ಲಿ ನನ್ನ ದೀರ್ಘ-ಕಾಲದ ಮನೆಗೆ ಹೋದಾಗ ಮಾತ್ರ ಸಂಪೂರ್ಣವಾಗಿ ಜ್ಞಾಪಿಸಿಕೊಳ್ಳಬಲ್ಲೆ....ನನ್ನ ಗೆಳೆಯನ ಬಳಿ ಕಾರ್ಟೂನ್ ರೇಖಾಚಿತ್ರದ ರೂಪದಲ್ಲಿ ಒಂದು ಮಕ್ಕಳ ಬೈಬಲ್ ಪುಸ್ತಕವಿತ್ತು. ಅದರಲ್ಲಿ ಕಾರ್ ಅಪಘಾತಕ್ಕೊಳಗಾಗಿದ್ದ ನನ್ನಂಥ ಒಬ್ಬ ಚಿಕ್ಕ ಹುಡುಗನಿದ್ದ. ಅವನು ತನ್ನ ಸೈಕಲ್ ಅನ್ನು ಚಲಾಯಿಸುತ್ತಿದ್ದ ಮತ್ತು ಪ್ರಭು ಅವನನ್ನು ಗುಣಪಡಿಸುವವರಿದ್ದರೋ ನನಗೆ ನೆನಪಿಲ್ಲ, ಆದರೆ ಪ್ರಭು ಯೇಸುವಿನ ನೆರಳುಗೆರೆ ಚಿತ್ರದ ಮೇಲ್ಭದಿಯ ಮೂಲೆಯಲ್ಲಿತ್ತು. ನಾನು ಹೇಳಿದಂತೆ, ಅದು ಸ್ಪಷ್ಟವಾಗಿತ್ತು, ಮತ್ತು ಎಲ್ಲವೂ ಸರಿಯಾಗಲಿದೆ ಎಂದು ಪ್ರಭುವು ನನಗೆ ಮನದಟ್ಟು ಮಾಡಿದರು. ಆ ಹುಡುಗನು ಗುಣವಾಗಿದ್ದರೆ, ಬಹಳ ಒಳ್ಳೆಯದು, ಅಥವಾ ಅವನು ಸತ್ತರೆ, ಅವನು ಪರಲೋಕದಲ್ಲಿರುವವನು. ಏನೇ ಆಗಲಿ, ಅದು ಗೆಲುವಿನ ಪರಿಸ್ಥಿತಿಯಾಗಿತ್ತು. ಆ ಹಂತದಲ್ಲಿ, ಪ್ರಭುವು, ತಾನೇ ಮಾರ್ಗ, ಸತ್ಯ, ಮತ್ತು ಬದುಕು ಎಂಬುದಕ್ಕೆ ನನ್ನ ಗ್ರಹಿಕೆಯನ್ನು ತೆರೆದರು. ಆದ್ದರಿಂದ ನನಗೆ ಮತ್ತೆ ಹುಟ್ಟಿ ಬಂದುದರ ಅನುಭವವಾಗಿರದಿದ್ದರೂ, ನಾನೊಬ್ಬ ಕ್ರೈಸ್ತಮತೀಯನು ಎಂದು ಆಲೋಚಿಸುತ್ತಿದ್ದೆ ಮತ್ತು ಹೇಳಿಕೊಳ್ಳುತ್ತಿದ್ದೆ.

*(ಪುಟ 6ರಲ್ಲಿ ಮುಂದುವರಿದಿದೆ)*

# ಲ್ಯಾಕ್ಲನ್ ಜಾನ್ಸನ್ ಅವರ ಪುರಾವೆ

*(ಪುಟ 5 ರಿಂದ ಮುಂದುವರಿದಿದೆ)*

ನನ್ನ ತಂದೆ ಹುಟ್ಟಿದ್ದ ರಾಜ್ಯಕ್ಕೆ ಸ್ಥಳ ಬದಲಾವಣೆ ಮಾಡಲು ನಿರ್ಧರಿಸಿದರು. ಅದಾದ ಕೆಲವೇ ದಿನಗಳಲ್ಲಿ, ನನ್ನ ತಂದೆ-ತಾಯಿ ವಿಚ್ಛೇದನೆ ಪಡೆದುಕೊಂಡರು. ನನ್ನ ತಾಯಿಯ ಬಳಿ ಬೆಳೆಯುವುದು ನನಗೆ ಒಳ್ಳೆಯ ಪರಿಸರವಲ್ಲ ಎಂದು ನನ್ನ ತಂದೆ ನಿರ್ಧರಿಸಿ, ನನ್ನನ್ನು ವಸತಿ ಶಾಲೆಗೆ ಸೇರಿಸಿದರು. ಇದರಿಂದ ನನಗೆ ಬಹಳ ಕಷ್ಟವಾಯಿತು, ನನ್ನ ತಾಯಿಯಿಂದ ನನ್ನನ್ನು ಬೇರ್ಪಡಿಸಿದ್ದು ಮತ್ತು ಸೈನಿಕ-ರೀತಿಯ ಶಾಲೆಯ ಕಟ್ಟುಪಾಡುಗಳಿಗೆ ಒಳಪಡಿಸಿದ್ದು. ಆ ಶಾಲೆಯು ಶ್ರೀಮಂತರಿಗೆ ಒಂದು ಖಾಸಗಿ ಶಾಲೆಯಾಗಿತ್ತು. ಅದರಿಂದ ನನಗೆ ಒಳ್ಳೆಯದಾಗುತ್ತದೆ ಎಂದು ನನ್ನ ತಾಯಿಯ ಅಭಿಪ್ರಾಯವಾಗಿತ್ತು, ಆದ್ದರಿಂದ ನಾನು ಅಲ್ಲಿ ಉಳಿದುಕೊಂಡೆ.

ನಾನೊಬ್ಬ ಕ್ರೈಸ್ತಮತೀಯನು ಎಂದು ಹೇಳಿಕೊಂಡು ತಿರುಗಾಡುತ್ತಿದ್ದೆ, ಮತ್ತು ಯಾವುದೋ ರೀತಿಯ ಪಾಪಿಯ ಪ್ರಾರ್ಥನೆಯನ್ನು ನಾನು ಹೇಳಿದರೂ, ರಕ್ಷಣೆ ಹೊಂದಿದವನಾಗಿ ಉಳಿಯಲು ನನಗೆ ಯಾರೂ ನೆರವಾಗಲಿಲ್ಲ. ಅವರು ಬೈಬಲ್ ನ ಕಿಂಗ್ ಜೇಮ್ಸ್ ಆವೃತ್ತಿಯಿಂದ ಓದುತ್ತಿದ್ದರು ಮತ್ತು ನಾವು ಕೀರ್ತನೆಗಳನ್ನು ಹಾಡಿದೆವು (ಅವುಗಳಿಗೆ ಸಂಗೀತ ಸಂಯೋಜಿಸಲಾಗಿತ್ತು). ಆದರೆ ತಾವು ಕ್ರೈಸ್ತಮತೀಯರು ಎಂದು ಎಂದೂ ಹೇಳಿಕೊಳ್ಳದ ಜನರು ಮಾಡುವ ಪಾಪಕ್ಕಿಂತ ಘೋರ ಪಾಪಗಳನ್ನು ನಾನು ಮಾಡುತ್ತಿದ್ದೆ. ಮತ್ತೆ ಹುಟ್ಟಿ ಬರುವುದು, ದೇವರ ಪವಿತ್ರಾತ್ಮದ ಮಾರ್ಗದರ್ಶನ ಯಾವುದೂ ಇರಲಿಲ್ಲ. ಅದು ಸಂಯೋಜಿತ ಧರ್ಮವಾಗಿತ್ತು. ತಾವು ಕ್ರೈಸ್ತಮತೀಯರು ಎಂದು ಹೇಳಿಕೊಂಡ ಯಾವುದೇ ವಿದ್ಯಾರ್ಥಿಗೆ ಅದು ಕೇವಲ ಶೋಕಿ ರೀತಿಯ ಅನುಭವವಾಗಿತ್ತೇ ಹೊರತು ಬದುಕು ಬದಲಾಯಿಸುವ ಅನುಭವವಾಗಿರಲಿಲ್ಲ.

ಆದ್ದರಿಂದ ನಾನು ಶಾಲೆಯನ್ನು ಬಿಟ್ಟೆನು. ನನ್ನ ಕೆಲವು ಶಾಲೆಯ ಗೆಳೆಯರು ಆಸ್ಟ್ರೇಲಿಯದಲ್ಲಿ ಬೆಳೆಯುತ್ತಿದ್ದ ಅತಿ ದೊಡ್ಡ ಚರ್ಚುಗಳಲ್ಲಿ ಒಂದಕ್ಕೆ ಹೋಗುತ್ತಿದ್ದರು, ಆದರೆ ನೀವು ದೇವರಿಗೆ ಹೆದರಬೇಕು ಮತ್ತು ಆತನ ಆಜ್ಞೆಗಳನ್ನು ಪಾಲಿಸಬೇಕೆಂದು ಅದು ಉಪದೇಶಿಸಲಿಲ್ಲವಾದ್ದರಿಂದ ಅದು ಅತ್ಯಂತ ದೊಡ್ಡವುಗಳಲ್ಲಿ ಒಂದಾಗಿತ್ತು. “ಕ್ರೈಸ್ತಮತೀಯ” ಬಾಸ್ಕೆಟ್ಬಾಲ್, “ಕ್ರೈಸ್ತಮತೀಯ ಸರ್ಫ್ ಬೋರ್ಡಿಂಗ್, ಮತ್ತು ಯುವ ಸಮೂಹಗಳಿದ್ದವು. ಆದ್ದರಿಂದ ನಾನು ಚರ್ಚಿಗೆ ಹೋಗುತ್ತಿದ್ದೆ, ಆದರೆ ಅನೇಕ ತಪ್ಪು ಕಾರಣಗಳಿಗಾಗಿ ಮತ್ತು ವಾರದ ಉಳಿದ ದಿನ ನನಗೆ ಬೇಕಾದ್ದನ್ನು ಮಾಡುತ್ತಿದ್ದೆ. ಅವರು ಪಾಪದ ತೀವ್ರತೆಯ ಬಗ್ಗೆ ಉಪದೇಶಿಸಲಿಲ್ಲ. ನೀವು ಲೋಕದಿಂದ ಪ್ರತ್ಯೇಕವಾಗಿ, ಪ್ರತ್ಯೇಕವಾದ ಮತ್ತು ಪವಿತ್ರವಾದ ಜನರಾಗಿರಬೇಕು ಎಂಬ ಅಂಶವನ್ನು ಅವರು ಎಂದೂ ಒತ್ತಿ ಹೇಳಲಿಲ್ಲ. ನಿಮ್ಮ ವೃತ್ತಿಯಲ್ಲಿ ಅಥವಾ ಕೆಲಸದಲ್ಲಿ ಯಶಸ್ವಿಯಾಗಿ, ನಂತರ ನಿಮಗೆ ಸಾಧ್ಯವಾದಾಗ ಸಾಕ್ಷಿಯಾಗುವುದು ಚರ್ಚಿನ ಸಾಕ್ಷಿಯಾಗುವುದರ ಕಲ್ಪನೆಯಾಗಿತ್ತು.

ನಾನು ತಪ್ಪು ಗುಂಪಿನೊಂದಿಗೆ ಸೇರಿಕೊಂಡೆ, ಮತ್ತು ಜೀವನ ಪೂರ್ತಿ ಕೆಲಸ ಮಾಡುವುದರಲ್ಲಿ ಅರ್ಥವಿಲ್ಲ; ಈಗ ಮಜಾ ಮಾಡಿ ಎಂದು ಚರ್ಚಿನ ಈ ಗುಂಪಿನ ಜನರು ನಿರ್ಧರಿಸಿದರು. ಹಾಗಾಗಿ ನಾನು ಉದ್ಯೋಗವನ್ನು ತೊರೆದೆ. ನನ್ನ ತಂದೆ-ತಾಯಿಗೆ ಬೇಸರವಾಯಿತು. ಸ್ವಲ್ಪ ಸಮಯ ಇದನ್ನು ಮಾಡಿದ ನಂತರ, ಬದಲಾವಣೆಗಾಗಿ ಯುನೈಟೆಡ್ ಸ್ಟೇಟ್ಸ್ ಗೆ ಬರಲು ನಿರ್ಧರಿಸಿದೆ. ಅದು ಕ್ರಿಸ್ಮಸ್ ಸಮಯವಾಗಿತ್ತು, 1986ರಲ್ಲಿ ನಾನು ಇಲ್ಲಿಗೆ ಹಾರಿದೆ ಮತ್ತು ಸುಮ್ಮನೆ ಸುತ್ತಾಡಿದೆ. ನಾನು ಪುನಃ ಪಾಪಕ್ಕೆ ಜಾರಿದ್ದೆ ಮತ್ತು ಎಲ್ಲಾ ರೀತಿಯ ಪಾಪವನ್ನು ಮಾಡುತ್ತಿದ್ದೆ, ಆದರೂ ನಾನು ಕ್ರೈಸ್ತಮತೀಯನೆಂದು ಹೇಳಿಕೊಳ್ಳುತ್ತಿದ್ದೆ. ಇದು 3 ತಿಂಗಳ ವರೆಗೆ ನಡೆಯಿತು.

ಪ್ಯಾಸ್ಟರ್ ಅಲಾಮೊ ಅವರು ಒಂದು ಚರ್ಚ್ ಹೊಂದಿದ್ದ ಮಿಯಾಮಿಯಲ್ಲಿದ್ದೆ. ನನ್ನ ಕೈಯಲ್ಲಿ ಬಿಯರ್ ಹಿಡಿದುಕೊಂಡು ಸಮುದ್ರ ತೀರದಿಂದ ಹಿಂದಿರುಗುತ್ತಿದ್ದೆ ಮತ್ತು ಕಳೆದು ಹೋದ ಆತ್ಮಗಳನ್ನು ಹುಡುಕುತ್ತಾ ರಸ್ತೆಯಲ್ಲಿ ಮಿನಿಸ್ಟ್ರಿಯಿಂದ ಇಬ್ಬರು ಸಹೋದರರಿದ್ದರು. ಅವರು ನನ್ನ ಬಳಿ ಬಂದು ನಾನು ಕ್ರೈಸ್ತಮತೀಯನೆ ಎಂದು ಕೇಳಿದರು ಮತ್ತು ನಾನು ಹೌದು ಎಂದೆ. ಅವರು, “ನೀವು ಎಲ್ಲಾ ಆಜ್ಞೆಗಳನ್ನು ಪಾಲಿಸುತ್ತಿದ್ದೀರಾ?” ಎಂದು ಕೇಳಿದರು. ನಾನು, “ಇಲ್ಲ” ಎಂದು ಹೇಳಬೇಕಾಯಿತು. ನನ್ನ ಆತ್ಮದ ಮೇಲಿದ್ದ ಪಾಪವು ನನ್ನನ್ನು ಉರಿಯುವ ನರಕಕ್ಕೆ ಕರೆದುಕೊಂಡು ಹೋಗಲಿದೆ ಎಂದು ಅವರು ನನಗೆ ಹೇಳಿದರು. ಅದು ನಿನ್ನೆ ನಡೆದಂತೆ ನನಗೆ ನೆನಪಿದೆ. ನಾನು ಪ್ರಾರ್ಥನಾ ಸಭೆಗೆ ಬರಲು ಬಯಸುವೆನೆ ಎಂದು ಅವರು ನನ್ನನ್ನು ಕೇಳಿದರು, ಹಾಗಾಗಿ ನಾನು ಪ್ರಾರ್ಥನಾ ಸಭೆಗೆ ಅವರನ್ನು ಹಿಂಬಾಲಿಸಿದೆ.

ಪ್ರಾರ್ಥನಾ ಸಭೆಯನ್ನು ಒಂದು ಚಿಕ್ಕ ಮನೆಯಲ್ಲಿ ನಡೆಸಲಾಯಿತು – ಅಲ್ಲಿ ಯಾವುದೇ ಆಡಂಬರವಿಲ್ಲ. ನಾನು ನನ್ನ ಬದುಕನ್ನು ಪ್ರಭುವಿಗೆ ಪುನಃ ಸಮರ್ಪಿಸಿದೆ. ಸಭೆಯ ನಂತರ, ನನಗೆ ಬಹಳ

## ಜಾಂಬಿಯಾ

ಪ್ರೀತಿಯ ಸಹೋದರರೇ,

ಬೇಗನೆ ಬರಲಿರುವ ನಮ್ಮ ಉದ್ಧಾರಕರಾದ ಯೇಸು ಕ್ರಿಸ್ತರ ಅದ್ಭುತವಾದ ಹೆಸರಿನಲ್ಲಿ ನಮಸ್ಕಾರಗಳು. ನನ್ನ ಕುಟುಂಬ, ಭಕ್ತಸಂಘ ಮತ್ತು ನಾನು ಚೆನ್ನಾಗಿದ್ದೇವೆ. ನೀವೂ ಚೆನ್ನಾಗಿದ್ದೀರೆಂದು ನಿರೀಕ್ಷಿಸುತ್ತೇನೆ. ಪ್ಯಾಸ್ಟರ್ ಟೊನಿ ಅಲಾಮೊ ಅವರ ಒಳ್ಳೆಯ ಆರೋಗ್ಯಕ್ಕಾಗಿ, ಮತ್ತು ದೇವರ ರಕ್ಷಣೆಗಾಗಿ ದೇವರಲ್ಲಿ ಪ್ರಾರ್ಥಿಸುತ್ತೇನೆ. ನೀವು ಕಳುಹಿಸಿದ ಪ್ಯಾಕೇಜ್ ನನಗೆ ಶುಕ್ರವಾರದಂದು ಸಿಕ್ಕಿತು. ನಿಮ್ಮ ಬೆಂಬಲಕ್ಕಾಗಿ ಧನ್ಯವಾದಗಳು.

ಕ್ರಿಸ್ತರು ಸೈದ್ಧಾಂತಿಕ ಮತ್ತು ಕಾರ್ಯಸಾಧ್ಯ ಕ್ರೈಸ್ತಮತದ ಪ್ರಮುಖ ಪ್ರೇರಣೆಯಾಗಿದ್ದಾರೆ. ಶುದ್ಧೀಕರಣ ಹಾಗೂ ಸಮರ್ಥನೆಯ ಸರಿಯಾದ ಜ್ಞಾನಕ್ಕೆ ಕ್ರಿಸ್ತರ ಸರಿಯಾದ ಜ್ಞಾನ ಅಗತ್ಯವಾಗಿದೆ.

ಯೇಸುವಿನ ಹೆಸರೊಂದೇ ನಿರಂತರ ಮಹಿಮೆಯ ಬಾಗಿಲಿನಿಂದ ಪ್ರವೇಶ ಪಡೆಯಲು ಮಾರ್ಗವಾಗಿದೆ. ನಾವು ನಮ್ಮ ಸ್ವಂತ ಹೆಸರುಗಳಿಂದ ಆ ಬಾಗಿಲಿಗೆ ಬಂದರೆ, ನಾವು ಕಳೆದುಹೋಗುತ್ತೇವೆ; ನಮಗೆ ಪ್ರವೇಶ ಸಿಗುವುದಿಲ್ಲ; ನಾವು ವ್ಯರ್ಥವಾಗಿ ಬಾಗಿಲನ್ನು ತಟ್ಟುತ್ತೇವೆ. ನಾವು ಯೇಸುವಿನ ಹೆಸರಿನಲ್ಲಿ ಬಂದರೆ, ಅದೊಂದು ಪಾಸ್ ಪೋರ್ಟ್ ಮತ್ತು ನಮಗೆ ಪ್ರವೇಶ ಸಿಕ್ಕಿ ನಾವು ಬದುಕುತ್ತೇವೆ. ಕ್ರಿಸ್ತರ ರಕ್ತದ ಗುರುತೊಂದೇ ನಮ್ಮನ್ನು ವಿನಾಶದಿಂದ ರಕ್ಷಿಸಬಲ್ಲ ಗುರುತಾಗಿದೆ.

ಭಾನುವಾರದಂದು, ನಾನು ಚಿಂಗಾಲಾ ಜಿಲ್ಲೆಯಲ್ಲಿ ಬೈಬಲ್ ವೇ ಮಿನಿಸ್ಟ್ರೀಸ್ ನಲ್ಲಿ ಉಪದೇಶ ನೀಡಿದೆ. ಯೆಹೋಶುವ 1:1-9ರಿಂದ “ಸ್ಥಿರಚಿತ್ತನಾಗಿರು, ಧೈರ್ಯದಿಂದಿರು” ಎಂಬುದು ಸಂದೇಶವಾಗಿತ್ತು. ಧರ್ಮೋಪದೇಶವನ್ನು ಕೇಳಲು ಭಕ್ತಸಂಘವು ಉತ್ಸಾಹಿಯಾಗಿತ್ತು. ಪ್ರಾರ್ಥನಾ ಸಭೆಯ ನಂತರ, ನಾನು ಪ್ಯಾಸ್ಟರ್ ಅಲಾಮೊ ಅವರ ಸುವಾರ್ತಾ ಸಾಹಿತ್ಯವನ್ನು ಮೂರು ಸ್ಥಳಗಳಲ್ಲಿ ನಾಲ್ಕು ಚರ್ಚುಗಳಿಗೆ ಹಂಚಿದೆನು. ಯೇಸು ಕ್ರಿಸ್ತರ ಮೂಲಕ ರಕ್ಷಣೆಯ ಯೋಜನೆಯನ್ನು ಹೊಂದಿರುವ ಸುವಾರ್ತಾ ಸಾಹಿತ್ಯವನ್ನು ಪಡೆಯಲು ಪ್ಯಾಸ್ಟರ್ ಗಳಿಗೆ ಸಂತೋಷವಾಯಿತು.

ಈ ನಡುವೆ, ಪ್ಯಾಸ್ಟರ್ ಲಾಜಾರಸ್ ಕುಲುಲು ಅವರು, ಬೈಬಲ್ ವೇ ಮಿನಿಸ್ಟ್ರೀಸ್ ನ ಮತ್ತೊಂದು ಚರ್ಚ್ ಇರುವ ನಗೋಸ ಫಾರ್ಮ್ ಎಂಬಲ್ಲಿ ಒಂದು ಗ್ರಾಮೀಣ ಪ್ರದೇಶಕ್ಕೆ ಉಪದೇಶಿಸಲು ಹೋದರು. ಅವರು ಕೂಡ ನಿಮ್ಮ ಸುವಾರ್ತಾ ಸಾಹಿತ್ಯವನ್ನು ಹಂಚಿದರಾದರೂ ಬೇಡಿಕೆ ಇನ್ನೂ ಇದೆ. ಪ್ರಭುವು ಸಂಪನ್ಮೂಲಗಳನ್ನು ಒದಗಿಸಿದರೆ, ಸೋಲ್ವೆಜಿ ರಸ್ತೆಯಾದ್ಯಂತ ಚರ್ಚುಗಳಿಗೆ ನೆರವಾಗಲು ಹೆಚ್ಚು ಸುವಾರ್ತಾ ಸಾಹಿತ್ಯವನ್ನು ಕಳುಹಿಸಿ.

ನಿಮ್ಮ ಬೆಂಬಲವನ್ನು ನಾನು ಯಾವಾಗಲೂ ಗೌರವಿಸುತ್ತೇನೆ. ನಿಮ್ಮ ಸುವಾರ್ತಾ ಸಾಹಿತ್ಯದ ಮೂಲಕ ಹಲವಾರು ಆತ್ಮಗಳನ್ನು ಗೆಲ್ಲಲಾಗಿದೆ.

ಕೊನೆಗೆ, ಭಕ್ತಸಂಘಕ್ಕೆ ನನ್ನ ನಮಸ್ಕಾರಗಳನ್ನು ತಿಳಿಸಿ. ನಿಮ್ಮಿಂದ ಬೇಗನೆ ಉತ್ತರ ಪಡೆಯುವಂತೆ ಪ್ರಾರ್ಥಿಸುತ್ತೇನೆ.

ಕ್ರಿಸ್ತರಲ್ಲಿ ನಿಮ್ಮ ಸಹೋದ್ಯೋಗಿ,
ಇಸಾನ್ ಪೊಲೆನಿ ಕಾಪರ್ಬೆಲ್ಟ್, ಜಾಂಬಿಯಾ

ಪಿ.ಎಸ್.ವುಸಾಕಿಲಿ, ಮತ್ತು ಚಂಬೋಲಿ ಟೌನ್ ಷಿಪ್ ಗಳಲ್ಲಿ ಸುವಾರ್ತೆಯನ್ನು ಬೋಧಿಸುತ್ತಿರುವ ಪ್ಯಾಸ್ಟರ್ ಮಾರಲ್ ಮುಸೋಂಡಾ ಅವರಿಗೆ ನಾನು ಉಳಿದ ಸುವಾರ್ತಾ ಸಾಹಿತ್ಯವನ್ನು ತೆಗೆದುಕೊಂಡು ಹೋದೆನು. ಅದು ಕ್ರಿಸ್ತರಿಗೆ ಇನ್ನೂ ಹೆಚ್ಚು ಆತ್ಮಗಳನ್ನು ಗೆಲ್ಲುತ್ತಿದೆ.

ನಿರಾಳವೆನಿಸಿತು. ಈ ಮಿನಿಸ್ಟ್ರಿಯ ಬಗ್ಗೆ ಒಂದು ಅತ್ಯುತ್ತಮ ಅಂಶವೆಂದರೆ, ನಾನು ಮಿನಿಸ್ಟ್ರಿ ಸೇರಿಕೊಳ್ಳಬಹುದು ಮತ್ತು ನನ್ನ ಎಲ್ಲಾ ಅಗತ್ಯತೆಗಳನ್ನು ಪೂರೈಸಲಾಗುವುದು ಎಂದು ಅವರು ಹೇಳಿದರು. ನನಗೆ ಈ ರೀತಿಯ ಚರ್ಚ್ ಪರಿಸರದ ಅಗತ್ಯವಿತ್ತು ಎಂದು ಪ್ರಭುವಿಗೆ ತಿಳಿದಿತ್ತು, ಇಲ್ಲದಿದ್ದರೆ ಪಾಪಿಯ ಪ್ರಾರ್ಥನೆ ಹೇಳಿ ತಮ್ಮ ದಾರಿಗೆ ಹಿಂದಿರುಗಿ ಪುನಃ ಪಾಪಕ್ಕೆ ಜಾರುವ ಅನೇಕರಂತೆ ನಾನೂ ಕೂಡ ಆಗುತ್ತಿದ್ದೆ.

ಅದು 1987ರ ಏಪ್ರಿಲ್ ನಲ್ಲಿ ನಡೆಯಿತು ಮತ್ತು ಅಂದಿನಿಂದ ನಾನು ಮಿನಿಸ್ಟ್ರಿಯೊಂದಿಗೆ ಇದ್ದೇನೆ. ಮಿನಿಸ್ಟ್ರಿಯಲ್ಲಿ ನಾನು ಅನೇಕ ಪ್ರಾರ್ಥನಾ ಸಭೆಗಳಿಗೆ ಹೋಗಿದ್ದೇನೆ, ದೇಶಾದ್ಯಂತ ತಿರುಗಾಡಿ ಸಾಕ್ಷಿ ಹೇಳಿದ್ದೇನೆ ಮತ್ತು ಪ್ಯಾಸ್ಟರ್ ಅಲಾಮೊ ಅವರ ಸುವಾರ್ತಾ ಸಾಹಿತ್ಯವನ್ನು ಹಂಚಿದ್ದೇನೆ. ನಾನು ಹಲವಾರು ವಿವಿಧ ಕಾರ್ಯ ಕೌಶಲಗಳನ್ನು ಕಲಿತಿದ್ದೇನೆ. ಪ್ಯಾಸ್ಟರ್ ಅಲಾಮೊ ಒಳ್ಳೆಯ ಗೆಳೆಯರಾಗಿದ್ದಾರೆ ಮತ್ತು ಆಧ್ಯಾತ್ಮಿಕವಾಗಿ ನನಗೆ ಬಹಳ ನೆರವಾಗಿದ್ದಾರೆ. ಈ ಕ್ರೈಸ್ತಮತೀಯ ಮಿನಿಸ್ಟ್ರಿಯು ಯಾರದ್ದಾದರೂ ಆತ್ಮಕ್ಕೆ ನಿಜವಾಗಿಯೂ ಒಂದು ಬಹಳ ಸುರಕ್ಷಿತ ಆಶ್ರಯಧಾಮವಾಗಿದೆ. ಪ್ರಭುವು ನನಗೆ ಒಂದು ಸ್ಥಳವನ್ನು ಒದಗಿಸಿದಕ್ಕಾಗಿ ನನಗೆ ಬಹಳ ಸಂತೋಷವಾಗಿದೆ, ಏಕೆಂದರೆ, ತಾವು ಪರಲೋಕಕ್ಕೆ ಸರಿಯಾದ ಮಾರ್ಗದಲ್ಲಿರುವರೆಂದು ಆಲೋಚಿಸುವ, ಆದರೆ ಧರ್ಮಗ್ರಂಥಗಳ ಪ್ರಕಾರ, ನರಕದ ದಾರಿಯಲ್ಲಿರುವ, ತಾವು ಕ್ರೈಸ್ತಮತೀಯರೆಂದು ಹೇಳಿಕೊಳ್ಳುವ ಜನರಂತೆ ನಾನೂ ಆಗುವುದನ್ನು ತಡೆದಿದೆ. ನಾನು ನನಗೆ ನೆರವಾದ ಪ್ರಭುವನ್ನು ಮತ್ತು ಪ್ಯಾಸ್ಟರ್ ಅಲಾಮೊ ಅವರನ್ನು ಮತ್ತು ಕ್ರಿಸ್ತರ ದೇಹದಲ್ಲಿನ ಎಲ್ಲಾ ಸಹೋದರರು ಮತ್ತು ಸಹೋದರಿಯರನ್ನು ಸ್ತುತಿಸಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಪ್ರಭುವನ್ನು ಸ್ತುತಿಸಿ,

ಲ್ಯಾಕ್ಲನ್ ಜಾನ್ಸನ್



*ಪ್ಯಾಸ್ಟರ್ ಕೆ.ಎಸ್.ಮನೋಹರ್ (ಎಡ ಮೇಲ್ಭಾಗದಲ್ಲಿ, ಮತ್ತು ಬಲ ಕೆಳಭಾಗದಲ್ಲಿ) ಭಾರತದ ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ಪ್ಯಾಸ್ಟರ್ ಅಲಾಮೊ ಅವರ ಆತ್ಮ-ಗೆಲ್ಲುವ ಸಾಹಿತ್ಯವನ್ನು ಹಂಚುತ್ತಿರುವುದು.*



## ರಷ್ಯಾ

ನಮಸ್ಕಾರ,

ನಿಮ್ಮ ನಂಬಿಕೆಗಳ ಆಧಾರದ ಮೇಲಿನ ಕರಪತ್ರಗಳಿಗಾಗಿ ಬಹಳ ಧನ್ಯವಾದಗಳು. ನಾನು ಇದನ್ನೆಲ್ಲ ಬೈಬಲ್ ಗೆ ಹೋಲಿಸಿದೆ ಮತ್ತು ಅದು ಸತ್ಯ! ಈಗ ಅವು ನನ್ನ ನಂಬಿಕೆಗಳಾಗಿವೆ. ದುರದೃಷ್ಟವಶಾತ್, ರಷ್ಯಾದಲ್ಲಿ ವಿಶ್ವಾಸವಿಡುವುದು ಬಹಳ ಕಷ್ಟ. ಆತ್ಮಗಳನ್ನು ಹುಡುಕುತ್ತಾ ನಾನು ಕರಪತ್ರಗಳ ಒಂದು ಭಾಗವನ್ನು ಹಂಚಿದೆನು, ಆದರೆ ನಾನು ಕೆಟ್ಟ ಜನರ ಕೈಗೆ ಸಿಕ್ಕಿಬಿದ್ದ ಅದಕ್ಕಾಗಿ ಅವರು ನನ್ನನ್ನು ಹೊಡೆದರು, ಏಕೆಂದರೆ ನಾನು ಈ ಸತ್ಯವನ್ನು ಹಂಚಿಕೊಳ್ಳಲು ಬಯಸಿದೆನು. ಬಹಳ ಸಮಯ ನಾನು ನಿಮ್ಮ ಸಂದೇಶಕ್ಕೆ ಉತ್ತರ ನೀಡದೆ ಇದ್ದುದಕ್ಕಾಗಿ ನನ್ನನ್ನು ಕ್ಷಮಿಸಿ. ನಾನೊಬ್ಬ ಬಡಪಾಯಿ ಮತ್ತು ನನ್ನ ಬಳಿ ಇಂಟರ್ನೆಟ್ ಸಂಪರ್ಕವಿಲ್ಲ. ಈಗ ಬಹಳ ಕಷ್ಟವಾಗಿದೆ. ಯಾವುದೇ ಕೆಲಸವಿಲ್ಲ ಮತ್ತು ಕಾಲಕಾಲಕ್ಕೆ ಆಹಾರವಿಲ್ಲ. ನನಗಾಗಿ ಪ್ರಾರ್ಥಿಸಬೇಕೆಂದು ನಾನು ನಿಮ್ಮನ್ನು ಕೋರುತ್ತೇನೆ. ನಾನು ನಿಮಗೆ ಬೇಗನೆ ಬರೆಯಲು ಪ್ರಯತ್ನಿಸುತ್ತೇನೆ. ದೀಕ್ಷಾಸ್ನಾನದ ಬಗ್ಗೆ ಮತ್ತು ನಮ್ಮ ಮುಂದಿನ ಸಂಪರ್ಕದ ಬಗ್ಗೆ ಕಲಿಯಲು ಇನ್ನೂ ಇದೆ.

ರಷ್ಯಾದಿಂದ ನಿಮ್ಮ ಗೆಳೆಯ,

ಮ್ಯಾಕ್ಸಿಮ್ ಆರ್.

## ಕೀನ್ಯಾ

ಪ್ರೀತಿಯ ಇವ್ಯಾಂಜಲಿಸ್ಟ್ ಟೋನಿ ಅಲಾಮೊ,

ನನಗೆ ನಿಮ್ಮ ರೇಡಿಯೋ ಕಾರ್ಯಕ್ರಮ ಸಿಕ್ಕಿದ್ದಕ್ಕಾಗಿ ನಾನು ದೇವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನಾನು ನಿಮ್ಮ ಕಾರ್ಯಕ್ರಮದಿಂದ ಬಹಳಷ್ಟು ಕಲಿತಿದ್ದೇನೆ. ಹೇಗೆ ಬದುಕಬೇಕು ಮತ್ತು ಹೇಗೆ ಪ್ರೀತಿಸಬೇಕು ಮತ್ತು ಆರೋಗ್ಯದ ಬಗ್ಗೆ ಮತ್ತು ಕುಟುಂಬದ ಬಗ್ಗೆ ಮುಂತಾದ ಗಂಭೀರ ವಿಷಯಗಳ ಬಗ್ಗೆ ನೀವು ಮಾತನಾಡುತ್ತೀರಿ.

ನನ್ನನ್ನು ಮತ್ತು ನನ್ನ ಕುಟುಂಬವನ್ನು ಮತ್ತು ನನ್ನ ತಂದೆ-ತಾಯಿಯನ್ನು ಕೂಡ ರಕ್ಷಿಸಲು ಪ್ರಭುವು ನಿಮ್ಮನ್ನು ಬಳಸಿದರು. ನನಗೆ ನೆರವಾಗುವ ಕೆಲವು ಕ್ರೈಸ್ತಮತೀಯ ಸಾಹಿತ್ಯವನ್ನು ಕಳುಹಿಸಿ.

ಆತನ ಪವಿತ್ರ ನಾಮದಲ್ಲಿ,

ಸೈಮನ್ ನಗೂಗಿ ನ್ಯಾಹುರುರು, ಕೀನ್ಯಾ

## ಕ್ಯೂಬಾ

*ಸ್ಪ್ಯಾನಿಷ್ ಭಾಷೆಯಿಂದ ಅನುವಾದಿಸಲಾಗಿದೆ*

ಪ್ರೀತಿಯ ಸಹೋದರ ಪ್ಯಾಸ್ಟರ್ ಅಲಾಮೊ,

ನಿಮ್ಮ ಹೃದಯದ ಕೋರಿಕೆಗಳನ್ನು ದೇವರು ಪೂರೈಸಲಿ ಎಂದು ನಾನು ಹಾರೈಸುತ್ತೇನೆ. ಹೊಸ ವರ್ಷದ ಶುಭಾಶಯಗಳು! ಪ್ಯಾಸ್ಟರ್, ನಾನು ಕೋರಿದ್ದ ಸಿ.ಡಿ.ಗಳನ್ನು ಮತ್ತು "ಟೋನಿ ಅಲಾಮೊ" ಟೀ-ಶರ್ಟ್ ಗಳನ್ನು ನಾನು ಕೊನೆಗೂ ಪಡೆದುದಕ್ಕೆ ಬಹಳ ಕೃತಜ್ಞನಾಗಿದ್ದೇನೆ. ಇದರಿಂದ ನನಗೆ ಬಹಳ ಸಂತೋಷವಾಗಿದೆ. ಪ್ಯಾಸ್ಟರ್, ಅನೇಕರಿಗೆ ನಿಮ್ಮ ಸುದ್ದಿಪತ್ರಿಕೆಗಳು ಮತ್ತು ದ ಮೆಸ್ಸೈಅ ಪುಸ್ತಕವು ಸಿಕ್ಕಿದೆ. ಅವುಗಳಲ್ಲಿ ಯೇಸು ಕ್ರಿಸ್ತರ ಬಗ್ಗೆ ಹೆಚ್ಚು ಸ್ಪಷ್ಟವಾದ ಮತ್ತು ವಿಸ್ತಾರವಾದ ಜ್ಞಾನ ಇರುವುದರಿಂದ, ಅನೇಕರ ಮೇಲೆ ಪ್ರಭಾವ ಬೀರಿವೆ. ನಿಮ್ಮ ಸುದ್ದಿಪತ್ರಿಕೆಗಳು ಹಲವಾರು ಆತ್ಮಗಳನ್ನು ಸಂತೋಷಪಡಿಸಿವೆ ಮತ್ತು ಬದುಕುಗಳನ್ನು ತುಂಬಿವೆ. ಸುವಾರ್ತೆಯನ್ನು ಬೋಧಿಸಲು ಇನ್ನೂ ಹೆಚ್ಚು ಸಮಯ ಮತ್ತು ಸ್ವಾತಂತ್ರ್ಯವನ್ನು ನಾವು ಬಯಸುತ್ತೇವೆ, ಆದರೆ ದೇವರು ತೋರಿಸಿದಂತೆ ನಾವು ನಡೆಯುತ್ತೇವೆ.

ಪ್ಯಾಸ್ಟರ್, ನಾವು ನಿಮಗೆಲ್ಲರಿಗಾಗಿ ಪ್ರಾರ್ಥಿಸುವುದನ್ನು ಮುಂದುವರಿಸುತ್ತಿದ್ದೇವೆ. ಕುಗ್ಗದಿರಿ. ಮುನ್ನಡೆಯಿರಿ. ದೇವರು ನಮ್ಮನ್ನು ಪ್ರೀತಿಸುತ್ತಾರೆ. "ಸ್ವಸ್ಥಚಿತ್ತರಾಗಿರಿ, ಎಚ್ಚರವಾಗಿರಿ; ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ. ನೀವು ನಂಬಿಕೆಯಲ್ಲಿ ದೃಢರಾಗಿದ್ದು ಅವನನ್ನು ಎದುರಿಸಿರಿ; ಲೋಕದಲ್ಲಿರುವ ನಿಮ್ಮ ಸಹೋದರರೂ ಅಂಥ ಬಾಧೆಗಳನ್ನೇ ಅನುಭವಿಸುತ್ತಿದ್ದಾರೆಂದು ನಿಮಗೆ ಹೇಗೂ ತಿಳಿದಿದೆ ಅಲ್ಲವೇ" (1 ಪೇತ್ರನು 5:8-9). ನಾನು ನಿಮ್ಮೆಲ್ಲರನ್ನು ಬಹಳ ಪ್ರೀತಿಸುತ್ತೇನೆ!!

ಆಶೀರ್ವಾದಗಳು!

ಡೇಯಿ ಮ್ಯಾಡಿಲೆಡಿಸ್ ಹವಾನಾ, ಕ್ಯೂಬಾ

## ಫಿಲಿಪೀನ್ಸ್

ನನ್ನ ಪ್ರಯಾಣದ ಭಾಗವಾಗಿದ್ದಕ್ಕೆ ಧನ್ಯವಾದಗಳು. ನನ್ನ ಆಧ್ಯಾತ್ಮಿಕ ಅಗತ್ಯತೆಗಳನ್ನು ಪೂರೈಸುವಲ್ಲಿ ನಿಮ್ಮ ಕಾರ್ಯಕ್ರಮ ಬಹಳ ದೊಡ್ಡ ಪಾತ್ರ ವಹಿಸಿತು. ಭರವಸೆಯ ನಿಮ್ಮ ಸಂದೇಶಗಳು ನನಗೆ ಸಮಾಧಾನ ಮತ್ತು ಪುನರಾಶ್ವಾಸನೆಯನ್ನು ತಂದವು, ಮತ್ತು ಪ್ರತಿಕೂಲ ಸ್ಥಿತಿಗಳ ಹೊರತಾಗಿ ಮುಂದುವರಿಯಲು ನನ್ನನ್ನು ಪ್ರೇರೇಪಿಸಿದವು. ಸೋಲೊಪ್ಪಿಕೊಳ್ಳಬೇಕೆಂದೆನಿಸುವ ಎಷ್ಟೋ ಸಮಯಗಳಿವೆ. ಆದರೆ, ನನ್ನ ಪ್ರಭುವಿನಲ್ಲಿ ನನ್ನ ವಿಶ್ವಾಸವನ್ನಿಟ್ಟರೆ ಇವೆಲ್ಲವೂ ನಡೆದುಹೋಗುತ್ತವೆ ಎಂಬ ನಿಮ್ಮ ಸಂದೇಶಗಳು ಯಾವಾಗಲು ನನ್ನ ಮನಸ್ಸಿಗೆ ಬರುತ್ತವೆ.

ಧನ್ಯವಾದಗಳು, ಮತ್ತು ಆತ್ಮಗಳನ್ನು ರಕ್ಷಿಸುವ ಈ ಶ್ರೇಷ್ಠ ಕೆಲಸವನ್ನು ಮುಂದುವರಿಸಿ.

ಹೃತ್ಪೂರ್ವಕವಾಗಿ,

ಜೋಸ್ಲಿನ್ ಒಗಾಯಾನ್

ಕ್ವೆಜಾನ್ ನಗರ, ಫಿಲಿಪೀನ್ಸ್

## ಮೇಲೆ ಆಕಾಶದಲ್ಲಿ ಅದ್ಭುತಕಾರ್ಯಗಳು ಹಾಗೂ ಕೆಳಗೆ ಭೂಮಿಯಲ್ಲಿ ಚಿಹ್ನೆಗಳು

*(ಪುಟ 5 ರಿಂದ ಮುಂದುವರಿದಿದೆ)*

ರಾಜ್ಯದಲ್ಲಿ ನೀವು ನಿರಂತರತೆಯನ್ನು ಕಳೆಯಲು ಸಾಧ್ಯವಾಗುವಂತೆ ನಿಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು ಪವಿತ್ರಾತ್ಮದಿಂದ ಪುನರ್ಜನ್ಮ ಪಡೆಯಲು ಇದು ಸರಿಯಾದ ಸಮಯ ಎಂದು ನಿಮಗನಿಸುವುದಿಲ್ಲವೆ? ಇದೇ ನಿಮ್ಮ ಬಯಕೆ ಆಗಿದ್ದರೆ, ಈ ಪ್ರಾರ್ಥನೆಯನ್ನು ಹೇಳಿ:

**ನನ್ನ ಪ್ರಭುವೇ ಮತ್ತು ನನ್ನ ದೇವರೇ, ಪಾಪಿಯಾದ ನನ್ನ ಮೇಲೆ ಕರುಣೆ ತೋರಿ.[9] ಯೇಸು ಕ್ರಿಸ್ತರು ಜೀವಸ್ವರೂಪನಾದ ದೇವರ ಮಗನು ಎಂದು ನಾನು ನಂಬಿದ್ದೇನೆ.[10] ನನ್ನ ಹಿಂದಿನ ಎಲ್ಲಾ ಪಾಪಗಳನ್ನು ಕ್ಷಮಿಸುವುದಕ್ಕಾಗಿ ಆತ ಶಿಲುಬೆಯಲ್ಲಿ ಮರಣ ಹೊಂದಿದನು ಮತ್ತು ತನ್ನ ಅಮೂಲ್ಯ ರಕ್ತವನ್ನು ಸುರಿಸಿದನು ಎಂದು ನಾನು ನಂಬಿದ್ದೇನೆ.[11] ದೇವರು ಪವಿತ್ರಾತ್ಮನ ಶಕ್ತಿಯಿಂದ ಯೇಸುವನ್ನು ಸತ್ತವರಿಂದ ಪುನರುತ್ಥಾನಗೊಳಿಸಿದರು,[12] ಮತ್ತು ಈ ಗಳಿಗೆಯಲ್ಲಿ ನನ್ನ ಪಾಪನಿವೇದನೆಯನ್ನು ಮತ್ತು ಈ ಪ್ರಾರ್ಥನೆಯನ್ನು ಕೇಳುತ್ತಾ ಆತ ದೇವರ ಬಲಗಡೆಯಲ್ಲಿ ಕುಳಿತಿದ್ದಾನೆ ಎಂದು ನಾನು ನಂಬಿದ್ದೇನೆ.[13] ಪ್ರಭು ಯೇಸುವೇ, ನಾನು ನನ್ನ ಹೃದಯದ ಬಾಗಿಲನ್ನು ತೆರೆದು ನಿಮ್ಮನ್ನು ನನ್ನ ಹೃದಯದೊಳಗೆ ಆಮಂತ್ರಿಸುತ್ತೇನೆ.[14] ಕಾಲ್ವಾರಿಯಲ್ಲಿ ಶಿಲುಬೆಯ ಮೇಲೆ ನನ್ನ ಜಾಗದಲ್ಲಿ ನೀವು ಸುರಿಸಿದ ಅಮೂಲ್ಯ ರಕ್ತದಲ್ಲಿ ನನ್ನ ಎಲ್ಲಾ ಹೊಲಸು ಪಾಪಗಳನ್ನು ತೊಳೆದುಬಿಡಿ.[15] ನೀವು ನನ್ನನ್ನು ತಿರಸ್ಕರಿಸುವುದಿಲ್ಲ, ಪ್ರಭು ಯೇಸುವೇ; ನೀವು ನನ್ನ ಪಾಪಗಳನ್ನು ಕ್ಷಮಿಸುವಿರಿ ಮತ್ತು ನನ್ನ ಆತ್ಮವನ್ನು ರಕ್ಷಿಸುವಿರಿ. ನನಗೆ ಗೊತ್ತು ಏಕೆಂದರೆ ನಿಮ್ಮ ಪದವಾದ ಬೈಬಲ್ ಹೀಗೆಂದು ಹೇಳುತ್ತದೆ.[16] ನೀವು ಯಾರನ್ನೂ ತಿರಸ್ಕರಿಸುವುದಿಲ್ಲ ಎಂದು ನಿಮ್ಮ ಪದ ಹೇಳುತ್ತದೆ, ಮತ್ತು ಅದರಲ್ಲಿ ನಾನೂ ಸೇರಿದ್ದೇನೆ.[17] ಆದ್ದರಿಂದ ನೀವು ನನ್ನ ಮಾತು ಕೇಳಿಸಿಕೊಂಡಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನೀವು ನನಗೆ ಉತ್ತರಿಸಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನಾನು ರಕ್ಷಣೆ ಹೊಂದಿದ್ದೇನೆ ಎಂದು ನನಗೆ ತಿಳಿದಿದೆ.[18] ನನ್ನ ಆತ್ಮವನ್ನು ರಕ್ಷಣೆ ಮಾಡಿದ್ದಕ್ಕಾಗಿ, ಪ್ರಭು ಯೇಸುವೇ, ನಾನು ನಿಮಗೆ ಕೃತಜ್ಞನು, ಮತ್ತು ನೀವು ಆದೇಶಿಸಿದಂತೆ ನಡೆದುಕೊಂಡು ಇನ್ನು ಮುಂದೆ ಪಾಪ ಮಾಡದೆ ನಾನು ನನ್ನ ಕೃತಜ್ಞತೆಯನ್ನು ತೋರಿಸುತ್ತೇನೆ.[19]**

ರಕ್ಷಣೆಯ ನಂತರ, ಯೇಸುವು ತಂದೆಯ, ಮಗನ, ಮತ್ತು ಪವಿತ್ರಾತ್ಮದ ಹೆಸರಿನಲ್ಲಿ, ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ, ದೀಕ್ಷಾಸ್ನಾನ ಮಾಡಿದರೆಂದು ಹೇಳಲಾಗುತ್ತದೆ.[20] ಬೈಬಲ್ ಸೊಸೈಟಿ ಆಫ್ ಇಂಡಿಯಾದ 'ಸತ್ಯವೇದವು" [ಇಂಗ್ಲಿಷ್ ನ ಕೆಜೆವಿ] ಬೈಬಲ್ ಅನ್ನು ಓದಿ, ಮತ್ತು ನೀವು ಸಾಯುವ ತನಕ ಅದು ಹೇಳಿದ್ದನ್ನು ಮಾಡಿ.[21]

ರಕ್ಷಣೆಯ ಬಗ್ಗೆ ನೀವು ಇತರರಿಗೆ ತಿಳಿಸಬೇಕೆಂದು ಪ್ರಭು ಬಯಸುತ್ತಾರೆ (ಮಾರ್ಕ 16:15). ನೀವು ಪ್ಯಾಸ್ಟರ್ ಟೋನಿ ಅಲಾಮೊ ಅವರ ಸುವಾರ್ತೆಯ ಸಾಹಿತ್ಯದ ವಿತರಕರಾಗಬಹುದು. ನಾವು ನಿಮಗೆ ಸಾಹಿತ್ಯವನ್ನು ಯಾವುದೇ ಶುಲ್ಕವಿಲ್ಲದೆ ಕಳುಹಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಮಗೆ ಕರೆಮಾಡಿ ಅಥವಾ ಇಮೇಲ್ ಮಾಡಿ. ಈ ಸಂದೇಶವನ್ನು ಬೇರೆಯವರೊಂದಿಗೆ ಹಂಚಿಕೊಳ್ಳಿ.

ನಾವು ಪಾಸ್ಟರ್ ಅಲಾಮೊ ಅವರ ಸಾಹಿತ್ಯವನ್ನು ಅನೇಕ ಭಾಷೆಗಳಲ್ಲಿ ಮುದ್ರಿಸುತ್ತೇವೆ, ಮತ್ತು ಪ್ರಂಪಚದೆಲ್ಲೆಡೆ ಕಳುಹಿಸುತ್ತೇವೆ. ನಾವು ಮುದ್ರಣ ಕಾಗದ ಮತ್ತು ಶಿಪ್ಪಿಂಗ್ ಗಾಗಿ ಅನೇಕ ಮಿಲಿಯ ಡಾಲರುಗಳನ್ನು ವ್ಯಯಿಸುತ್ತೇವೆ, ಹಾಗಾಗಿ ನಮಗೆ ನಿಮ್ಮ ಪ್ರಾರ್ಥನೆ ಮತ್ತು ಆರ್ಥಿಕ ಸಹಾಯದ ಅಗತ್ಯವಿದೆ.

ಜಗತ್ತು ರಕ್ಷಣೆ ಪಡೆಯಬೇಕೆಂದು ನೀವು ಬಯಸಿದರೆ ಯೇಸು ಆದೇಶಿಸುವಂತೆ, ದೇವರಿಂದ ಆತನ ದಶಾಂಶಗಳನ್ನು ಮತ್ತು ಕೊಡುಗೆಗಳನ್ನು ಕದ್ದುಕೊಳ್ಳಬೇಡಿ. ದೇವರು ಹೀಗೆ ಹೇಳಿದರು, "ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವಾದರೋ ನನ್ನಿಂದ ಕದ್ದುಕೊಳ್ಳುತ್ತಿದ್ದೀರಿ. ನನ್ನಿಂದ ಏನು ಕದ್ದುಕೊಂಡಿದ್ದೀರಿ ಎಂದು ಕೇಳುತ್ತೀರೋ? ದಶಮಾಂಶ, ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ. ನೀವು ಅಂದರೆ ಈ ಜನಾಂಗದವರೆಲ್ಲಾ [ಮತ್ತು ಈ ಸಂಪೂರ್ಣ ಜಗತ್ತು] ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಆಲಯವು [ರಕ್ಷಣೆ ಹೊಂದಿರುವ ಆತ್ಮಗಳು] ಆಹಾರಶೂನ್ಯವಾಗದಂತೆ [ಆಧ್ಯಾತ್ಮಿಕ ಆಹಾರ] ನೀವು ದಶಮಾಂಶವನ್ನು [ದಶಮಾಂಶ ಎಂದರೆ ನಿಮ್ಮ ಒಟ್ಟು ಆದಾಯದ 10%] ಯಾವತ್ತೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ. ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದಂತಾಗುವುದು; ಇದು ಸೇನಾಧೀಶ್ವರ ಯೆಹೋವನ ನುಡಿ. ಆಗ ಸಕಲ ಜನಾಂಗಗಳವರು ನಿಮ್ಮನ್ನು ಧನ್ಯರೆಂದು ಕೊಂಡಾಡುವರು; ನಿಮ್ಮ ದೇಶವು ಆನಂದವಾಗಿರುವದು; ಇದು ಸೇನಾಧೀಶ್ವರ ಯೆಹೋವನ ನುಡಿ" (ಮಲಾಕಿಯ 3:8-12).

---

**9** ಕೀರ್ತನೆಗಳು 51:5, ರೋಮಾಪುರದವರಿಗೆ 3:10-12, 23 **10** ಮತ್ತಾಯ 26:63-64, 27:54, ಲೂಕ 1:30-33, ಯೋಹಾನ 9:35-37, ರೋಮಾಪುರದವರಿಗೆ 1:3-4 **11** ಅಪೋಸ್ತಲರ ಕೃತ್ಯಗಳು 4:12, 20:28, ರೋಮಾಪುರದವರಿಗೆ 3:25, 1 ಯೋಹಾನ 1:7, ಪ್ರಕಟನೆ 5:9 **12** ಕೀರ್ತನೆಗಳು 16:9-10, ಮತ್ತಾಯ 28:5-7, ಮಾರ್ಕ 16:9, 12, 14, ಯೋಹಾನ 2:19, 21, 10:17-18, 11:25, ಅಪೋಸ್ತಲರ ಕೃತ್ಯಗಳು 2:24, 3:15, ರೋಮಾಪುರದವರಿಗೆ 8:11, 1 ಕೊರಿಂಥದವರಿಗೆ 15:3-7 **13** ಲೂಕ 22:69, ಅಪೋಸ್ತಲರ ಕೃತ್ಯಗಳು 2:25-36, ಇಬ್ರಿಯರಿಗೆ 10:12-13 **14** 1 ಕೊರಿಂಥದವರಿಗೆ 3:16, ಪ್ರಕಟನೆ 3:20 **15** ಎಫೆಸದವರಿಗೆ 2:13-22, ಇಬ್ರಿಯರಿಗೆ 9:22, 13:12, 20-21, 1 ಯೋಹಾನ 1:7, ಪ್ರಕಟನೆ 1:5, 7:14 **16** ಮತ್ತಾಯ 26:28, ಅಪೋಸ್ತಲರ ಕೃತ್ಯಗಳು 2:21, 4:12, ಎಫೆಸದವರಿಗೆ. 1:7, ಕೊಲೊಸ್ಸೆಯವರಿಗೆ 1:14 **17** ಮತ್ತಾಯ 21:22, ಯೋಹಾನ 6:35, 37-40, ರೋಮಾಪುರದವರಿಗೆ 10:13 **18** ಇಬ್ರಿಯರಿಗೆ 11:6 **19** ಯೋಹಾನ 5:14, 8:11, ರೋಮಾಪುರದವರಿಗೆ 6:4, 1 ಕೊರಿಂಥದವರಿಗೆ 15:10, ಪ್ರಕಟನೆ 7:14, 22:14 **20** ಧರ್ಮೋಪದೇಶಕಾಂಡ 4:29, 6:5, 10:12, 11:13, 13:3-4, 26:16, 30:6, ಯೆಹೋಶುವನು 22:5, ಮತ್ತಾಯ 22:37-40, ಮಾರ್ಕ 12:29-31, ಲೂಕ 10:27 **21** ಧರ್ಮೋಪದೇಶಕಾಂಡ 4:29, 13:4, 26:16, ಯೆಹೋಶುವನು 1:8, 22:5, 2 ತಿಮೊಥೆಯನಿಗೆ 2:15, 3:14-17, ಯಾಕೋಬನು 1:22-25, ಪ್ರಕಟನೆ 3:18

ಹೆಚ್ಚಿನ ಮಾಹಿತಿಗಾಗಿ ಅಥವಾ ಆಸಕ್ತಿಕರವಾಗಿರಬಹುದಾದ ಇತರ ವಿಷಯಗಳ ಬಗ್ಗೆ ಸಾಹಿತ್ಯಕ್ಕಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

**Tony Alamo, World Pastor, Tony Alamo Christian Ministries Worldwide • P.O. Box 2948, Hollywood, CA 90078**

**24 ಗಂಟೆಗಳ ಪ್ರಾರ್ಥನೆಯ ಸಹಾಯವಾಣಿ: (661) 252-5686 • Fax (661) 252-4362**

**www.alamoministries.com • info@alamoministries.com**

ತಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ಪ್ರಭುವಿನ ಸೇವೆ ಮಾಡಲು ನಿಜವಾಗಿಯೂ ಬಯಸುವ ನಮ್ಮ ಎಲ್ಲಾ ಯು.ಎಸ್. ತಾಣಗಳಲ್ಲಿರುವವರಿಗೆ ಬದುಕಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳೊಂದಿಗೆ ವಾಸಿಸಲು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ವರ್ಲ್ಡ್‌ವೈಡ್ ಸ್ಥಳ ಒದಗಿಸುತ್ತದೆ.

ಆರಾಧನೆಗಳನ್ನು ನ್ಯೂ ಯಾರ್ಕ್ ನಗರದಲ್ಲಿ ಪ್ರತಿ ಮಂಗಳವಾರ ರಾತ್ರಿ 8 ಗಂಟೆಗೆ ಮತ್ತು ಇತರ ತಾಣಗಳಲ್ಲಿ ಪ್ರತಿ ರಾತ್ರಿ ನಡೆಸಲಾಗುತ್ತದೆ.

ಮಾಹಿತಿಗಾಗಿ ದಯವಿಟ್ಟು (908) 937-5723 ಗೆ ಕರೆ ಮಾಡಿ. ಪ್ರತಿ ಆರಾಧನೆಯ ನಂತರ ಊಟೋಪಚಾರವಿರುತ್ತದೆ.

333ಕ್ಕೂ ಹೆಚ್ಚಿನ ಭವಿಷ್ಯವಾಣಿಗಳಲ್ಲಿ ಹಳೆ ಒಡಂಬಡಿಕೆಯಿಂದ ಕ್ರಿಸ್ತರನ್ನು ತೋರಿಸುವ ಪ್ಯಾಸ್ಟರ್ ಅಲಾಮೊ ಅವರ, ದ ಮೆಸ್ಸಾಯ, ಪುಸ್ತಕವನ್ನು ಕೇಳಿ ಪಡೆಯಿರಿ.

*ಪ್ಯಾಸ್ಟರ್ ಅಲಾಮೊ ಅವರ ಸಾಹಿತ್ಯದ ವಿತರಕರಾಗುವ ಮೂಲಕ ಆತ್ಮಗಳ ಕೊಯ್ಲಿನಲ್ಲಿ ಶ್ರಮಜೀವಿಯಾಗಿರಿ.*

*ನಮ್ಮ ಎಲ್ಲಾ ಸಾಹಿತ್ಯ ಮತ್ತು ಆಡಿಯೊ ಸಂದೇಶಗಳು, ಷಿಪಿಂಗ್ ಸೇರಿದಂತೆ ಶುಲ್ಕರಹಿತವಾಗಿವೆ. ಅವುಗಳಿಗಾಗಿ ನಿಮ್ಮಿಂದ ಯಾರಾದರೂ ಶುಲ್ಕ ಪಡೆಯಲು ಪ್ರಯತ್ನಿಸುತ್ತಿದ್ದರೆ, ದಯವಿಟ್ಟು (661) 252-5686 ಗೆ ಕಲೆಕ್ಟ್ ಕರೆ ಮಾಡಿ.*

**ಈ ಸಾಹಿತ್ಯವು ರಕ್ಷಣೆಯ ನಿಜವಾದ ಯೋಜನೆಯನ್ನು ಹೊಂದಿದೆ (ಅಪೋಸ್ತಲರ ಕೃತ್ಯಗಳು 4:12).**

ಇದನ್ನು ಬಿಸಾಡಬೇಡಿ, ಬೇರೆ ಯಾರಿಗಾದರೂ ಕೊಡಿ.

ಇತರ ದೇಶಗಳಲ್ಲಿರುವವರೇ, ಈ ಸಾಹಿತ್ಯವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.

ನೀವು ಮರುಮುದ್ರಣ ಮಾಡುವುದೇ ಆದಲ್ಲಿ, ದಯವಿಟ್ಟು ಈ ಕೃತಿಸ್ವಾಮ್ಯ ಮತ್ತು ನೋಂದಣಿಯನ್ನು ಸೇರಿಸಿ:

© Copyright March 2013 All rights reserved World Pastor Tony Alamo ®Registered March 2013

KANNADA—VOLUME 17600—*Wonders In Heaven Above and Signs In the Earth Beneath*